2018 ಕ.ತೀ.ವ 83

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ

## ಕೆನರಾ ಬ್ಯಾಂಕ್ –ವಿರುದ್ಧ– ಶ್ರೀ ಗಿರಿಜಾ ಪ್ರಸಾದ್ ಗುಪ್ತ*

ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 43 ಕ್ರಮಾದೇಶ 1(ಎ) ರಡಿಯಲ್ಲಿ ಸಂಕೀರ್ಣ ಮೊದಲನೇ ಮೇಲ್ಮನವಿ.

ಮೇಲ್ಮನವಿದಾರರು ಲಘು ವ್ಯವಹಾರಗಳ ನ್ಯಾಯಾಲಯದಲ್ಲಿ ಸಲ್ಲಿಸಿದ ದಾವೆಯನ್ನು 1908ರ ಸಿವಿಲ್ ಪ್ರಕ್ರಿಯಾ ಸಂಹಿತೆ VIIನೇ ಕ್ರಮಾದೇಶ, ನಿಯಮ 10ರಡಿಯಲ್ಲಿ ವಾದಪತ್ರವನ್ನು ಹಿಂತಿರುಗಿಸಿದ ಕ್ರಮವನ್ನು ಪ್ರಶ್ನಿಸಿ ಸದರಿ ಸಂಕೀರ್ಣ ಮೊದಲನೇ ಮೇಲ್ಮನವಿ.

ಎದುರುದಾರ/ಪ್ರತಿವಾದಿಯು ಮೇಲ್ಮನವಿದಾರ/ಬ್ಯಾಂಕಿನಿಂದ ಕ್ಯಾನ್‌ಕಾರ್ಡ್ ಅನ್ನು ಕೊಲ್ಕತ್ತಾದಲ್ಲಿ ಪಡೆದು, ವ್ಯವಹಾರಗಳನ್ನು ಮೇಲ್ಮನವಿದಾರರ ಕೊಲ್ಕತ್ತಾ ಶಾಖೆಗಳಲ್ಲಿ ಮಾತ್ರ ಮಾಡಿರುತ್ತಾರೆ. ಎದುರುದಾರರು ಕೊಲ್ಕತ್ತಾದಲ್ಲಿ ಶಾಶ್ವತವಾಗಿ ನೆಲೆಸಿದ್ದು, ಅವರ ಕಾರ್ಡ್‌ಅನ್ನು ಕೊಲ್ಕತ್ತಾದಲ್ಲಿಯೇ ಕಾರ್ಯವಿಧಾನ ಅನುಸರಿಸಿ, ನೀಡಲಾಗಿದೆ. ಈ ಕಾರಣದಿಂದ ಮೇಲ್ಮನವಿದಾರರಿಗೆ ಬೆಂಗಳೂರಿನಲ್ಲಿ ಎದುರುದಾರರ ವಿರುದ್ಧ ದಾವೆ ಹೂಡಲು ವ್ಯಾಜ್ಯ ಕಾರಣ ಉದ್ಭವಿಸುವುದಿಲ್ಲ. ಈ ಕಾರಣದಿಂದ ಅಧಿವಿಚಾರಣಾ ನ್ಯಾಯಾಲಯದ ಆದೇಶವು ಸರಿಯಿದೆಯೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ಮೇಲ್ಮನವಿಯನ್ನು ವಜಾಗೊಳಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆಗಳು* | *ಪ್ಯಾರಾಗಳಲ್ಲಿ* |
| --- | --- |
| *1. ಎಐಆರ್ 1992 ಎಸ್‌ಸಿ 1514 ಮೆ. ಪಟೇಲ್ ರೋಡ್‌ವೇಸ್ –ವಿರುದ್ಧ– ಮೆ. ಪ್ರಸಾದ್ ಟ್ರೇಡಿಂಗ್ ಕಂಪನಿ* | *(ಉಲ್ಲೇ) 21* |

*ಎಂಎಫ್‌ಎ ಸಂಖ್ಯೆ: 6239/2010, ದಿನಾಂಕ: 3ನೇ ಮಾರ್ಚ್, 2017.

*2. ಎಐಆರ್ 1995 ಎಸ್‌ಸಿ 576*
*ಬೋರ್ಡ್ ಆಫ್ ಟ್ರಸ್ಟೀಸ್, ಕಲ್ಕತ್ತಾ ಪೋರ್ಟ್*
*-ವಿರುದ್ಧ- ಬಾಂಬೆ ಫ್ಲೋರ್ ಮಿಲ್ಸ್ ಪ್ರೈ.ಲಿ. (ಉಲ್ಲೇ) 23*

ಶ್ರೀ ಯು.ಆರ್. ನಾಯಕ್, ವಕೀಲರು ಇವರ ಪರವಾಗಿ ಶ್ರೀಮತಿ ದೇವಿಕ, ವಕೀಲರು. ಪ್ರತ್ಯರ್ಜಿದಾರರ ಪರವಾಗಿ: ನೋಟೀಸ್ ಜಾರಿ ಮಾಡಿದೆ.

**ತೀರ್ಪು**

**ನ್ಯಾಯಮೂರ್ತಿ ಶ್ರೀ ಬಿ. ವೀರಪ್ಪ:**

ಈ ಸಂಕೀರ್ಣ ಮೊದಲ ಅಪೀಲನ್ನು, ಸದರಿ ಪ್ರಕರಣವನ್ನು ಅಧಿವಿಚಾರಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ ಮುಂದೆ ಅದನ್ನು ಮಂಡಿಸುವ ನಿರ್ದೇಶನದೊಂದಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 1908ರ VII ಕ್ರಮಾದೇಶದ 10ನೇ ನಿಯಮದ ಮೇರೆಗೆ ವಾದಪತ್ರವನ್ನು ಹಿಂತಿರುಗಿಸಿ, XIIIನೇ ಹೆಚ್ಚುವರಿ ಲಘು ವ್ಯಾಜ್ಯಗಳ ನ್ಯಾಯಾಧೀಶರು ಹಾಗೂ ಸದಸ್ಯರು ಎಂಎಸಿಟಿ ಇವರ ಮುಂದಿದ್ದ ಕಡತ ಎಸ್.ಸಿ ಸಂಖ್ಯೆ 937/2009 ರಲ್ಲಿ ನೀಡಲಾದ 2010ರ ಫೆಬ್ರವರಿ 15 ರ ಆದೇಶದ ವಿರುದ್ಧ, ವಾದಿ ಬ್ಯಾಂಕು ಸಲ್ಲಿಸಿರುತ್ತದೆ.

2. ಅಧೀನ ನ್ಯಾಯಾಲಯದ ಎದುರು ವಾದಿಯಾಗಿದ್ದಂಥ ಪ್ರಸ್ತುತ ಅಪೀಲುದಾರ ಬ್ಯಾಂಕು, ವಾದಿಯ ಕ್ಯಾನ್‌ಕಾರ್ಡ್ ಯೋಜನೆಯಡಿಯಲ್ಲಿ, ಪ್ರತಿವಾದಿಯು ಕ್ಯಾನ್‌ಕಾರ್ಡ್ ವೀಸಾದ ಸದಸ್ಯತ್ವವನ್ನು ಹೊಂದಿದ್ದು, ಇದರ ಆಧಾರದ ಮೇಲೆ, ಬ್ಯಾಂಕ್ ಕ್ಯಾನ್‌ಕಾರ್ಡ್ ಸಂ. 4543-6302-00917003 ನ್ನು ವಿತರಿಸಿತ್ತೆಂದು ವಾದಿಸಿ, ಹಣದ ವಸೂಲಿಗೆ ಸಂಬಂಧಿಸಿದಂತೆ ಎಸ್‌ಸಿ ಸಂ. 937/2009 ರಲ್ಲಿ ಪ್ರತಿವಾದಿಯ ವಿರುದ್ಧ ದಾವೆಯನ್ನು ದಾಖಲಿಸಿರುತ್ತದೆ. ಕ್ಯಾನ್‌ಕಾರ್ಡ್‌ನಲ್ಲಿ ವಿಧಿಸಿದ ಅಗತ್ಯತೆಗಳನ್ನು ಪಾಲಿಸುವ ಮೂಲಕ ಕ್ಯಾನ್‌ಕಾರ್ಡ್ ಧಾರಕನು ಭಾರತ ಹಾಗೂ ನೇಪಾಳದಾದ್ಯಂತ ವ್ಯಾಪಿಸಿರುವ ಹಲವಾರು ಸದಸ್ಯ ಸಂಸ್ಥೆಗಳಲ್ಲಿ ಅಥವಾ ಸಂಸ್ಥೆಗಳಿಂದ

ಸರಕುಗಳನ್ನು ಖರೀದಿಸಬಹುದು ಅಥವಾ ಸೇವೆಗಳನ್ನು ಪಡೆಯಬಹುದಾಗಿರುತ್ತದೆಂಬುದು ಪ್ರತಿವಾದಿಯು ಕ್ಯಾನ್‌ಕಾರ್ಡ್‌ನ್ನು ಹೊಂದಿರುವುದರ ಪ್ರಯೋಜನವಾಗಿರುತ್ತದೆ ಹಾಗೂ ಪ್ರತಿವಾದಿಗಳು ಕ್ಯಾನ್‌ಕಾರ್ಡ್ ಯೋಜನೆಯ ನಿಬಂಧನೆ ಹಾಗೂ ಷರತ್ತುಗಳನ್ನು ಒಪ್ಪಿಕೊಂಡಿರುತ್ತಾನೆ. ಅಲ್ಲದೆ, ಈ ವಿವರ ಪಟ್ಟಿ ನೀಡಿದ ದಿನಾಂಕದಿಂದ 15 ದಿನಗಳ ಒಳಗೆ ಹಣ ಸಂದಾಯ ಮಾಡಲು ಒಪ್ಪಿಕೊಂಡಿರುತ್ತಾನೆ ಹಾಗೂ ಕ್ಯಾನ್‌ಕಾರ್ಡ್ ಧಾರಕನು ಪ್ರತೀ ತಿಂಗಳು ಶೇಕಡ 2.5 ರಷ್ಟು ದರದಲ್ಲಿ ಸೇವಾ ಶುಲ್ಕ ಹಾಗೂ ಬಡ್ಡಿಯನ್ನು ಸಂದಾಯ ಮಾಡಲು ಬದ್ಧನಾಗಿರುತ್ತಾನೆ. ಈತ ಕಾಲಕಾಲಕ್ಕೆ ಕ್ಯಾನ್‌ಕಾರ್ಡ್‌ನ ಬಳಕೆ ಮಾಡುತ್ತಿದ್ದು, ಹಣ ಸಂದಾಯ ಮಾಡಲು ವಿಫಲನಾಗಿರುತ್ತಾನೆ. ಹಾಗಾಗಿ, ವಾದಿ – ಬ್ಯಾಂಕ್ 71,841/– ರೂ.ಗಳ ಬಾಕಿ ಹಣವನ್ನು ಸಂದಾಯ ಮಾಡುವಂತೆ ದಿನಾಂಕ 29.11.2008 ರಂದು ತಗಾದೆಯ ಕಾನೂನು ನೋಟೀಸನ್ನು ವಿತರಿಸಿರುತ್ತದೆ. ದಾವೆಗೆ ಸಂಬಂಧಿಸಿದ ವ್ಯಾಜ್ಯ ಕಾರಣವು, ಪ್ರತಿವಾದಿಯು ದಿನಾಂಕ 08.03.2006 ರಂದು ಕ್ಯಾನ್‌ಕಾರ್ಡ್ ವೀಸಾದ ಸದಸ್ಯತ್ವಕ್ಕೆ ಸಂಬಂಧಿಸಿದಂತೆ ಅರ್ಜಿ ಸಲ್ಲಿಸಿದಾಗ, ಬೇರೆ ಬೇರೆ ದಿನಾಂಕಗಳಂದು ವೀಸಾ ಕಾರ್ಡ್‌ನ್ನು ನವೀಕರಿಸಿದಾಗ, ಸದರಿ ಕಾರ್ಡ್ ಹಾಗೂ ಮುಂತಾದವುಗಳನ್ನು ಬಳಕೆ ಮಾಡುವಾಗ ಉದ್ಭವಿಸಿರುತ್ತದೆ.

3. ಪ್ರತಿವಾದಿಯು, ಕ್ಯಾನ್‌ಕಾರ್ಡ್ ವೀಸಾ ಯೋಜನೆಯಡಿಯಲ್ಲಿ ಕ್ಯಾನ್‌ಕಾರ್ಡ್ ವೀಸಾದ ಸದಸ್ಯತ್ವವನ್ನು ಒಪ್ಪಿಕೊಂಡು ತನ್ನ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಈತನು ಸಲ್ಲಿಸಿದ ಮಾಸಿಕ ವಿವರ ಪಟ್ಟಿಯ ದಿನಾಂಕದಿಂದ 15 ದಿನಗಳ ಒಳಗೆ ಹಣ ಸಂದಾಯ ಮಾಡಲು ವಿಫಲವಾಗಿರುತ್ತಾನೆಂಬುದನ್ನು ಹಾಗೂ ಕ್ಯಾನ್‌ಕಾರ್ಡ್ ಧಾರಕನು ಬಾಕಿ ಮೊಬಲಗಿನ ಶೇ. 10ರಷ್ಟನ್ನು ಸಂದಾಯ ಮಾಡಬೇಕಿತ್ತೆಂಬುದನ್ನು ನಿರಾಕರಿಸಿರುತ್ತಾನೆ. ಅಲ್ಲದೆ ಈತ, ವಾದಿಗೆ 71,641/– ರೂಗಳ ಬಾಕಿ ಮೊಬಲಗು ಹಾಗೂ ಇತರೆ ದರಗಳನ್ನು ಸಂದಾಯ ಮಾಡಲು ಬದ್ಧನಾಗಿರಬೇಕೆಂಬ ವಾಸ್ತವಾಂಶವನ್ನು ನಿರಾಕರಿಸಿರುತ್ತಾನೆ. ಅಲ್ಲದೆ ಈತ ತಾನು ತಿಂಗಳಿಗೆ ಶೇ. 2.5ರ ದರದಲ್ಲಿ ಬಡ್ಡಿ ಸಂದಾಯ ಮಾಡಲು ಒಪ್ಪಿಕೊಂಡಿರುವುದಿಲ್ಲವೆಂದೂ, ತಾನು ಕೋಲ್ಕತ್ತಾದ ಖಾಯಂ ನಿವಾಸಿಯಾಗಿದ್ದು ಕ್ಯಾನ್‌ಕಾರ್ಡ್‌ನ್ನು ಕೋಲ್ಕತ್ತಾದಲ್ಲಿ ಮಾತ್ರವೇ ಬಳಸಿದ್ದು, ಅದಕ್ಕೆ ಸಂಬಂಧಿಸಿದ ದಾವೆಯನ್ನು ಹೂಡಲು, ಅದು ಬೆಂಗಳೂರಿನ ನ್ಯಾಯಾಲಯದ ವ್ಯಾಪ್ತಿಗೆ ಒಳಪಡದಿರುವುದರಿಂದ, ಇಲ್ಲಿ ದಾವೆ

ಸಲ್ಲಿಸುವುದು ಊರ್ಜಿತವಾಗಿರುವುದಿಲ್ಲವೆಂದೂ ವಾದಿಸಿರುತ್ತಾನೆ. ಹಾಗಾಗಿ, ದಾವೆಯನ್ನು ವಜಾಗೊಳಿಸಲು ಕೋರಿರುತ್ತಾನೆ.

4. ಮೇಲೆ ಹೇಳಿದ ವಾದಗಳನ್ನು ಆಧರಿಸಿ, ಅಧಿ ವಿಚಾರಣಾ ನ್ಯಾಯಾಲಯವು ಈ ಮುಂದಿನ ವಿವಾದಾಂಶಗಳನ್ನು ರೂಪಿಸಿರುತ್ತದೆ:

> *"1. ಪ್ರತಿವಾದಿಯು, ಈ ನ್ಯಾಯಾಲಯವು ಸದರಿ ದಾವೆಯನ್ನು ಅಂಗೀಕರಿಸಲು ಹಾಗೂ ದಾವೆಯನ್ನು ಅಧಿವಿಚಾರಿಸಲು ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂಬುದನ್ನು ರುಜುವಾತು ಪಡಿಸಿರುತ್ತಾನೆಯೇ?*
>
> *2. ವಾದಿ ಬ್ಯಾಂಕ್, ಪ್ರತಿ ತಿಂಗಳು ಶೇ 2.5 ರಷ್ಟು ದರದಲ್ಲಿ ನ್ಯಾಯಾಲಯದ ವೆಚ್ಚ ಹಾಗೂ ಚಾಲ್ತಿ ಹಾಗೂ ಭವಿಷ್ಯದ ಬಡ್ಡಿಯೊಂದಿಗೆ 71.841/– ರೂಗಳನ್ನು ವಸೂಲಿ ಮಾಡಲು ಹಕ್ಕುಳ್ಳದ್ದಾಗಿರುತ್ತದೆಯೇ?*
>
> *3. ಆದೇಶವೇನು?"*

5. ಪ್ರಕರಣವನ್ನು ಸುಸ್ಥಾಪಿಸುವ ಸಲುವಾಗಿ, ವಾದಿಯ ಬ್ಯಾಂಕಿನ ಅಧಿಕಾರಿಯನ್ನು ಪ್ರಾ.ಸಾ. 1 ಎಂದು ವಿಚಾರಣೆ ಮಾಡಿದ್ದು, ದಸ್ತಾವೇಜುಗಳನ್ನು ನಿಶಾನೆ ಪಿ. 1 ರಿಂದ ಪಿ. 5 ಎಂದು ಗುರುತು ಮಾಡಲಾಗಿರುತ್ತದೆ.

6. ಉಭಯ ಪಕ್ಷಕಾರರನ್ನು ಸುನಾವಣೆ ಮಾಡಿದ ತರುವಾಯ, ಅಧಿವಿಚಾರಣಾ ನ್ಯಾಯಾಲಯವು, ಪ್ರತಿವಾದಿಯು ಬೆಂಗಳೂರಿನಲ್ಲಿರುವ ನ್ಯಾಯಾಲಯವು ದಾವೆಯನ್ನು ಪುರಸ್ಕರಿಸಿ ಅಧಿವಿಚಾರಿಸಲು ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂಬುದನ್ನು ರುಜುವಾತುಪಡಿಸಿರುತ್ತಾನೆಂದೂ ಹಾಗೂ ವಾದಿಯು ಕೋರಿರುವ ಪರಿಹಾರಕ್ಕೆ ಹಕ್ಕುಳ್ಳದ್ದಾಗಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ. ತದನುಸಾರವಾಗಿ, ದಿನಾಂಕ 15.02.2010ರ ಪ್ರಶ್ನಿತ ಆದೇಶದ ಮೂಲಕ, ಸದರಿ

ಪ್ರಕರಣವನ್ನು ಅಧಿವಿಚಾರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವಂಥ ನ್ಯಾಯಾಲಯದ ಎದುರು ಸದರಿ ಪ್ರಕರಣವನ್ನು ಮಂಡಿಸುವ ನಿರ್ದೇಶನದೊಂದಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ VIIರ 10ನೇ ನಿಯಮದ ಮೇರೆಗೆ ವಾದಿಗೆ ವಾದ ಪತ್ರವನ್ನು ಹಿಂದಿರುಗಿಸಲಾಗುತ್ತದೆ. ಹಾಗಾಗಿ, ಪ್ರಸ್ತುತ ಅಪೀಲನ್ನು ಸಲ್ಲಿಸಲಾಗಿರುತ್ತದೆ.

7. ಪ್ರತ್ಯರ್ಜಿದಾರರಿಗೆ, ನೋಟಿಸನ್ನು ನೀಡಿದ್ದಾಗ್ಯೂ ಪ್ರತಿನಿಧಿಸದೆ ಹಾಗೆ ಉಳಿದಿದ್ದಾರೆ.

8. ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳ ವಾದವನ್ನು ನಾನು ಆಲಿಸಿರುತ್ತೇನೆ.

9. ಅಪೀಲುದಾರರ ಪರ ಹಾಜರಾದ ಮಾನ್ಯ ವಕೀಲರಾದ ಶ್ರೀಯುತ ಯು.ಆರ್. ನಾಯಕ್ ರವರ ಪರವಾಗಿ ಶ್ರೀಮತಿ ದೇವಿಕಾರವರು, ಅಧಿವಿಚಾರಣಾ ನ್ಯಾಯಲಯವು ಹೊರಡಿಸಿರುವ ಪ್ರಶ್ನಿತ ಆದೇಶವು, ಸರಿಯಾದ ನ್ಯಾಯಿಕ ವಿವೇಚನೆಯೊಂದಿಗೆ ಸಂಬಂಧಪಟ್ಟ ವಿಷಯದಲ್ಲಿ ಸೂಕ್ತ ತೀರ್ಪು ನೀಡದೆ ಅಧಿಕಾರವನ್ನು ಚಲಾಯಿಸುವ ಉದ್ದೇಶಕ್ಕೆ ಬಾಧಕವಾಗುವಂಥೆ ಅಧಿವಿಚಾರಣಾ ನ್ಯಾಯಾಲಯವು ಪ್ರಶ್ನಿತ ಆದೇಶವನ್ನು ಹೊರಡಿಸಿದ್ದು, ಅಧೀನ ನ್ಯಾಯಾಲಯವು ಸಿವಿಲ್ ಪ್ರಕ್ರಿಯೆ ಸಂಹಿತೆಯ 20ನೇ ಪ್ರಕರಣವನ್ನು ತಪ್ಪಾಗಿ ವ್ಯಾಖ್ಯಾನಿಸಿ ಸಮುಚಿತ ನ್ಯಾಯಾಲಯದ ಎದುರು ಪ್ರಕರಣವನ್ನು ಹಾಜರುಪಡಿಸುವಂತೆ ವಾದಪತ್ರವನ್ನು ಹಿಂತಿರುಗಿಸಿರುತ್ತದೆ. ಹಾಗಾಗಿ ಅಧೀನ ನ್ಯಾಯಾಲಯದ ಆದೇಶವು ವ್ಯತಿರಿಕ್ತವಾಗಿದ್ದು, ಸುಸ್ಥಾಪಿತ ಕಾನೂನು ತತ್ವಗಳಿಗೆ ವಿರುದ್ಧವಾಗಿರುತ್ತದೆಯೆಂದು ವಾದಿಸಿರುತ್ತಾರೆ. ಈಕೆ ಮುಂದುವರೆದು, ಅಧೀನ ನ್ಯಾಯಾಲಯವು, ವಾದ ಪತ್ರದ 3ನೇ ಪ್ಯಾರಾವನ್ನು ಗಮನಿಸುವಲ್ಲಿ ವಿಫಲವಾಗಿದೆ. ಅದರಲ್ಲಿ ವಾದಿಯು, ಬೆಂಗಳೂರಿನಲ್ಲಿನ ಕಚೇರಿಯಲ್ಲಿ ಪ್ರತಿವಾದಿಯು ಸಲ್ಲಿಸಿದ ಅರ್ಜಿಯನ್ನು ಪರಿಶೀಲಿಸಲಾಗಿರುತ್ತದೆಂದೂ ದಿನಾಂಕ 08.03.2006 ರಂದು ಪ್ರತಿವಾದಿಗೆ ಕ್ಯಾನ್‌ಕಾರ್ಡ್‌ನ್ನು ವಿತರಿಸಲಾಗಿರುತ್ತದೆಂದೂ, ಪ್ಯಾರ–8ರಲ್ಲಿ ಬೆಂಗಳೂರಿನಲ್ಲಿನ ನ್ಯಾಯಾಲಯವು, ದಾವೆಯನ್ನು ಅಧಿವಿಚಾರಿಸುವ ಅಧಿಕಾರ ವ್ಯಾಪ್ತಿಯನ್ನು

ಹೊಂದಿದ್ದು, ಇದನ್ನು ಅಧೀನ ನ್ಯಾಯಾಲಯವು ಪರಿಗಣಿಸಿರುವುದಿಲ್ಲವೆಂದು ವಾದಿಸಿರುತ್ತಾರೆ.

10. ಮುಂದುವರೆದು, ಮಾನ್ಯ ವಕೀಲರು, ಅಧೀನ ನ್ಯಾಯಾಲಯವು, ಸಿವಿಲ್ ಪ್ರಕ್ರಿಯಾ ಸಂಹಿತೆಯ 20(ಸಿ) ಪ್ರಕರಣದ ಉಪಬಂಧಗಳು ಹಾಗೂ ವಿವರಣೆಗಳನ್ನು ಪರಿಗಣಿಸದೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 20 (ಎ) ಪ್ರಕರಣದ ಉಪಬಂಧಗಳನ್ನು ಮಾತ್ರ ಮುಖ್ಯವಾಗಿ ಉದಾಹರಿಸಿ ಪ್ರಶ್ನಿತ ಆದೇಶ/ತೀರ್ಪನ್ನು ನೀಡಲು ಮುಂದುವರೆದಿದೆಯೆಂದು ವಾದಿಸಿದ್ದಾರೆ. ಅಲ್ಲದೆ, ಅಧೀನ ನ್ಯಾಯಾಲಯವು, ಕಾರ್ಡ್ ವಿತರಕ ಬ್ಯಾಂಕ್ ತನ್ನ ಇಚ್ಛೆಗನುಗುಣವಾಗಿ, ಕಾರ್ಡ್‌ಧಾರಕನ ವಿರುದ್ಧ, ಆತನು ವಾಸಿಸುತ್ತಿರುವ ಅಥವಾ ವ್ಯವಹಾರ ನಡೆಸುತ್ತಿರುವ ಅಥವಾ ಜೀವನೋಪಾಯಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಅಥವಾ ಕಾರ್ಡ್ ವಿತರಕ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಆತ/ಆಕೆ/ಅದರ ಲೆಕ್ಕ ಖಾತೆಯನ್ನು ನಿರ್ವಹಿಸುವ ಅಥವಾ ಕಾರ್ಡ್ ವಿತರಕ ಬ್ಯಾಂಕಿನ ಕೇಂದ್ರ ಕಚೇರಿಯಲ್ಲಿರುವ ನಗರದಲ್ಲಿ ಕಾರ್ಡ್ ಧಾರಕನ ವಿರುದ್ಧ ಅಂಥ ಯಾವುದೇ ದಾವೆ ಅಥವಾ ನಡಾವಳಿಗಳನ್ನು ಆರಂಭಿಸಬಹುದೆಂಬುದನ್ನು ಹೇಳಿರುವಂಥ ಕ್ಯಾನ್‌ಕಾರ್ಡ್ ವೀಸಾದ ನಿಬಂಧನೆ ಹಾಗೂ ಷರತ್ತುಗಳ 29ನೇ ಖಂಡದ ಉಪಬಂಧಗಳನ್ನು ಗಮನಿಸುವಲ್ಲಿ ವಿಫಲವಾಗಿದ್ದು, ಹಾಗಾಗಿ ಆಧೀನ ನ್ಯಾಯಾಲಯವು ಹೊರಡಿಸಿರುವ ಪ್ರಶ್ನಿತ ಆದೇಶವು ದೋಷಪೂರ್ಣವಾದುದಾಗಿರುತ್ತದೆಂದು ಆಕೆ ವಾದಿಸಿರುತ್ತಾರೆ. ಆದ್ದರಿಂದ, ಈಕೆ ಅಪೀಲನ್ನು ಅಂಗೀಕರಿಸುವ ಮೂಲಕ ಅಧಿ ವಿಚಾರಣಾ ನ್ಯಾಯಾಲಯವು ಹೊರಡಿಸಿರುವ ಪ್ರಶ್ನಿತ ಆದೇಶವನ್ನು ರದ್ದುಪಡಿಸಬೇಕೆಂದು ಕೋರಿರುತ್ತಾರೆ.

11. ಅಪೀಲುದಾರರ ಪರ ಮಾನ್ಯ ವಕೀಲರ ವಾದಗಳನ್ನು ಆಲಿಸಿದ ತರುವಾಯ, ಪ್ರಸ್ತುತ ಅಪೀಲಿನಲ್ಲಿ, ಪರಿಗಣನೆಗೆ ಉದ್ಭವಿಸುವ ಒಂದೇ ಅಂಶವೆಂದರೆ:

> ''ಅಧೀನ ನ್ಯಾಯಾಲಯವು, ಸಿವಿಲ್ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ VIIರ 10ನೇ ನಿಯಮದ ಮೇರೆಗೆ ವಾದಿಗಳಿಗೆ ವಾದಪತ್ರವನ್ನು, ಸದರಿ ಪ್ರಕರಣಗಳನ್ನು ಅಧಿವಿಚಾರಿಸಲು ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯದ ಮುಂದೆ ಮಂಡಿಸುವ

ನಿರ್ದೇಶನದೊಂದಿಗೆ ಹಿಂದಿರುಗಿಸಿರುವುದು ಸಮರ್ಥನೀಯವಾದುದೆ? ಎಂಬುದಾಗಿರುತ್ತದೆ."

12. ನಾನು, ಅಪೀಲುದಾರರ ಪರ ಹಾಜರಾದ ಮಾನ್ಯ ನ್ಯಾಯಾವಾದಿಗಳು ಮಂಡಿಸಿದ ವಾದಗಳನ್ನು ಹಾಗು ದಾಖಲೆಯ ಮುಂದಿರುವ ಒಟ್ಟಾರೆ ಸಾಮಗ್ರಿಗಳನ್ನು ಪರಿಶೀಲಿಸಿ ವಿವೇಚನಾಯುತ ಅಭಿಪ್ರಾಯವನ್ನು ನೀಡಿರುತ್ತೇನೆ.

13. ಪ್ರತಿವಾದಿಗೆ ಕ್ಯಾನ್‌ಕಾರ್ಡ್‌ನ್ನು ವಿತರಿಸಿದ್ದಂಥ ಕ್ಯಾನ್‌ಕಾರ್ಡ್ ಯೋಜನೆಯಡಿಯಲ್ಲಿ ಕ್ಯಾನ್‌ಕಾರ್ಡ್ ವೀಸಾದ ಸದಸ್ಯತ್ವ ಪಡೆದಿದ್ದಾರೆಂಬುದು ಹಾಗೂ ಕ್ಯಾನ್‌ಕಾರ್ಡ್‌ನ ನಿಬಂಧನೆ ಹಾಗೂ ಷರತ್ತುಗಳನ್ನು ಪ್ರತಿವಾದಿಯು ಒಪ್ಪಿಕೊಂಡಿದ್ದು, ಒಪ್ಪಂದ ಪತ್ರಕ್ಕೆ ಸಹಿಯನ್ನೂ ಸಹ ಮಾಡಿರುತ್ತಾರೆಂಬುದು, ಬೆಂಗಳೂರು ಕಚೇರಿಯಲ್ಲಿನ ವಾದಿಯು ಪ್ರತಿವಾದಿಯು ಸಲ್ಲಿಸಿದ, ಅರ್ಜಿಯನ್ನು ಪರಿಶೀಲನೆ ಮಾಡಲಾಗಿದೆಯೆಂಬುದು ಹಾಗೂ ಸದರಿ ಕ್ಯಾನ್‌ಕಾರ್ಡ್‌ನ್ನು ದಿನಾಂಕ 08.03.2006 ರಂದು ವಿತರಿಸಲಾಯಿತ್ತೆಂಬುದು ಹಾಗೂ ಬೆಂಗಳೂರಿನಲ್ಲಿನ ನ್ಯಾಯಾಲಯದಲ್ಲಿ ದಾವೆಯನ್ನು ಅಧಿವಿಚಾರಿಸುವ ಅಧಿಕಾರವ್ಯಾಪ್ತಿಯನ್ನು ಹೊಂದಿರುತ್ತದೆಂಬುದು ವಾದಿ– ಬ್ಯಾಂಕಿನ ನಿರ್ದಿಷ್ಟ ವಾದವಾಗಿರುತ್ತದೆ.

14. ಪ್ರತಿವಾದಿಯು ತನ್ನ ಲಿಖಿತ ಹೇಳಿಕೆಯಲ್ಲಿ ಮಾಡಿರುವ ಒಂದೇ ನಿರ್ದಿಷ್ಟ ವಾದವೆಂದರೆ, ತಾನು ಕೋಲ್ಕತ್ತಾದ ಖಾಯಂ ನಿವಾಸಿಯಾಗಿದ್ದು, ಕ್ಯಾನ್‌ಕಾರ್ಡ್‌ನ್ನು ಕೋಲ್ಕತ್ತಾದಲ್ಲಿ ಮಾತ್ರವೇ ಬಳಸಿರುತ್ತೇನೆಂಬುದು ಹಾಗೂ ಕ್ಯಾನ್‌ಕಾರ್ಡ್‌ಅನ್ನು ವಾದಿ – ಅಪೀಲುದಾರ ಬ್ಯಾಂಕು ಕೋಲ್ಕತ್ತಾದ ಬುರ್ರಾ ಬಜಾರ್ ಶಾಖೆಯಲ್ಲಿ ವಿತರಿಸಿದ್ದರಿಂದಾಗಿ, ಬೆಂಗಳೂರಿನಲ್ಲಿರುವ ನ್ಯಾಯಾಲಯವು ಈ ಪ್ರಕರಣವನ್ನು ಅಂಗೀಕರಿಸುವ ಯಾವುದೇ ಅಧಿಕಾರ ವ್ಯಾಪ್ತಿ ಇರುವುದಿಲ್ಲವೆಂಬುದಾಗಿರುತ್ತದೆ.

15. ವಾದಪತ್ರದಲ್ಲಿ ಹಾಗೂ ಲಿಖಿತ ಹೇಳಿಕೆಯಲ್ಲಿ ವಾದಿಸಿದ ಪರಸ್ಪರ ವಿರುದ್ಧ ವಾದಗಳ ಹಿನ್ನಲೆಯಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 20ನೇ ಪ್ರಕರಣದ

ಉಪಬಂಧಗಳನ್ನು ಉಲ್ಲೇಖಿಸುವುದು ಸೂಕ್ತವಾದುದಾಗಿದ್ದು, ಅದನ್ನು ಈ ಮುಂದಿನಂತೆ ಓದಲಾಗಿರುತ್ತದೆ:

> "20. ಇತರ ದಾವೆಗಳನ್ನು ಪ್ರತಿವಾದಿಗಳು ವಾಸಿಸುವಲ್ಲಿ ಅಥವಾ ವ್ಯಾಜ್ಯ ಕಾರಣವು ಉದ್ಭವಿಸುವಲ್ಲಿ ಹೂಡಬೇಕು:– ಮೇಲೆ ಹೇಳಿದ ಪರಿಮಿತಿಗಳಿಗೆ ಒಳಪಟ್ಟು, ಪ್ರತಿಯೊಂದು ದಾವೆಯನ್ನು ಯಾವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿತಿಮಿತಿಗಳೊಳಗೆ,–
>
> (ಎ) ಪ್ರತಿವಾದಿಯು, ಅಥವಾ ಒಬ್ಬನಿಗಿಂತ ಹೆಚ್ಚು ಪ್ರತಿವಾದಿಗಳಿರುವಲ್ಲಿ ಅವರಲ್ಲಿ ಪ್ರತಿಯೊಬ್ಬನು, ದಾವೆಯು ಪ್ರಾರಂಭವಾಗುವ ಕಾಲದಲ್ಲಿ, ವಾಸ್ತವವಾಗಿ ಮತ್ತು ಸ್ವಯಿಚ್ಛೆಯಿಂದ ವಾಸಿಸುತ್ತಿರುವನೋ ಅಥವಾ ವ್ಯವಹಾರವನ್ನು ನಡೆಸುತ್ತಿರುವನೋ ಅಥವಾ ಸಂಪಾದನೆಗೋಸ್ಕರ ಖುದ್ದಾಗಿ ಕೆಲಸ ಮಾಡುತ್ತಿರುವನೋ ಆ ನ್ಯಾಯಾಲಯದಲ್ಲಿ; ಅಥವಾ
>
> (ಬಿ) ಒಬ್ಬನಿಗಿಂತ ಹೆಚ್ಚಿನ ಪ್ರತಿವಾದಿಗಳು ಇರುವಲ್ಲಿ, ಅವರಲ್ಲಿ ಯಾರಾದರೊಬ್ಬನು ದಾವೆಯು ಪ್ರಾರಂಭವಾಗುವ ಕಾಲದಲ್ಲಿ ವಾಸ್ತವವಾಗಿ ಮತ್ತು ಸ್–ವಯಿಚ್ಛೆಯಿಂದ ವಾಸಿಸುತ್ತಿರುವನೋ ಅಥವಾ ವ್ಯವಹಾರವನ್ನು ನಡೆಸುತ್ತಿರುವನೋ ಅಥವಾ ಸಂಪಾದನೆಗೋಸ್ಕರ ಖುದ್ದಾಗಿ ಕೆಲಸ ಮಾಡುತ್ತಿರುವನೋ ಅಂಥ ನ್ಯಾಯಾಲಯದಲ್ಲಿ, ಪರಂತು, ಅಂಥ ಸಂದರ್ಭದಲ್ಲಿ ನ್ಯಾಯಾಲಯದ ಅನುಮತಿ ದೊರೆತಿದ್ದರೆ, ಅಥವಾ ಮೇಲೆ ಹೇಳಿದಂತೆ ವಾಸಿಸದ, ವ್ಯವಹಾರವನ್ನು ನಡೆಸದ, ಅಥವಾ ಸಂಪಾದನೆಗೋಸ್ಕರ ಖುದ್ದಾಗಿ ಕೆಲಸ ಮಾಡದ ಪ್ರತಿವಾದಿಗಳು, ಹಾಗೆ ದಾವೆ ಹೂಡಲು ಒಪ್ಪಿಗೆ ಕೊಟ್ಟಿದ್ದರೆ; ಅಥವಾ

(ಸಿ) ವ್ಯಾಜ್ಯ ಕಾರಣವು ಸಂಪೂರ್ಣವಾಗಿ ಅಥವಾ ಭಾಗಶಃ ಉದ್ಭವಿಸುತ್ತದೆಯೋ ಆ ನ್ಯಾಯಾಲಯದಲ್ಲಿ – ಹೂಡತಕ್ಕದ್ದು.

[1][x x x]

[2][**ವಿವರಣೆ**]:– ಒಂದು ನಿಗಮವು ಭಾರತದಲ್ಲಿನ ತನ್ನ ಏಕಮಾತ್ರ ಅಥವಾ ಪ್ರಧಾನ ಕಾರ್ಯಾಲಯದಲ್ಲಿ ಅಥವಾ, ಅವರು ಒಂದು ಅಧೀನ ಕಾರ್ಯಾಲಯವು ಸಹ ಇರುವ ಸ್ಥಳದಲ್ಲಿ ಉದ್ಭವಿಸುವ ಯಾವುದೇ ವ್ಯಾಜ್ಯ ಕಾರಣದ ಸಂಬಂಧದಲ್ಲಿ, ಅಂಥ ಸ್ಥಳದಲ್ಲಿ ವ್ಯವಹಾರವನ್ನು ನಡೆಸುತ್ತಿದೆಯೆಂದು ಭಾವಿಸತಕ್ಕದ್ದು.

16. ಸಿವಿಲ್ ಪ್ರಕ್ರಿಯಾ ಸಂಹಿತೆಯ 20ನೇ ಪ್ರಕರಣದ ಓದಿನಿಂದ, ಪ್ರತಿಯೊಂದು ದಾವೆಯನ್ನು ಯಾವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ–ಪ್ರತಿವಾದಿಯು, ಅಥವಾ ಒಬ್ಬನಿಗಿಂತ ಹೆಚ್ಚು ಪ್ರತಿವಾದಿಗಳಿರುವಲ್ಲಿ ಅವರಲ್ಲಿ ಪ್ರತಿಯೊಬ್ಬನು, ದಾವೆಯು ಪ್ರಾರಂಭವಾಗುವ ಕಾಲದಲ್ಲಿ, ವಾಸ್ತವವಾಗಿ ಮತ್ತು ಸ್ವಯಿಚ್ಛೆಯಿಂದ ವಾಸಿಸುತ್ತಿರುವನೋ ಅಥವಾ ವ್ಯವಹಾರವನ್ನು ನಡೆಸುತ್ತಿರುವನೋ ಅಥವಾ ಸಂಪಾದನೆಗೋಸ್ಕರ ಖುದ್ದಾಗಿ ಕೆಲಸ ಮಾಡುತ್ತಿರುವನೋ ಆ ನ್ಯಾಯಾಲಯದಲ್ಲಿ; ಅಥವಾ ಒಬ್ಬನಿಗಿಂತ ಹೆಚ್ಚಿನ ಪ್ರತಿವಾದಿಗಳು ಇರುವಲ್ಲಿ, ಅವರಲ್ಲಿ ಯಾರಾದರೊಬ್ಬನು ದಾವೆಯು ಪ್ರಾರಂಭವಾಗುವ ಕಾಲದಲ್ಲಿ ವಾಸ್ತವವಾಗಿ ಮತ್ತು ಸ್ವ–ಯಿಚ್ಛೆಯಿಂದ ವಾಸಿಸುತ್ತಿರುವನೋ ಅಥವಾ ವ್ಯವಹಾರವನ್ನು ನಡೆಸುತ್ತಿರುವನೋ ಅಥವಾ ಸಂಪಾದನೆಗೋಸ್ಕರ ಖುದ್ದಾಗಿ ಕೆಲಸ ಮಾಡುತ್ತಿರುವನೋ ಅಂಥ ನ್ಯಾಯಾಲಯದಲ್ಲಿ, ಪರಂತು, ಅಂಥ ಸಂದರ್ಭದಲ್ಲಿ ನ್ಯಾಯಾಲಯದ ಅನುಮತಿ ದೊರೆತಿದ್ದರೆ, ಅಥವಾ ಮೇಲೆ ಹೇಳಿದಂತೆ ವಾಸಿಸದ, ವ್ಯವಹಾರವನ್ನು ನಡೆಸದ, ಅಥವಾ ಸಂಪಾದನೆಗೋಸ್ಕರ ಖುದ್ದಾಗಿ ಕೆಲಸ ಮಾಡದ ಪ್ರತಿವಾದಿಗಳು, ಹಾಗೆ ದಾವೆ ಹೂಡಲು ಒಪ್ಪಿಗೆ ಕೊಟ್ಟಿದ್ದರೆ; ಅಥವಾ ವ್ಯಾಜ್ಯ ಕಾರಣವು ಸಂಪೂರ್ಣವಾಗಿ ಅಥವಾ ಭಾಗಶಃ ಉದ್ಭವಿಸುತ್ತದೆಯೋ ಆ ನ್ಯಾಯಾಲಯದಲ್ಲಿ ಹೂಡತಕ್ಕದ್ದು. ಸದರಿ ಉಪಬಂಧಗಳ ವಿವರಣೆಯು, ಒಂದು ನಿಗಮವು ಭಾರತದಲ್ಲಿನ

ತನ್ನ ಏಕಮಾತ್ರ ಅಥವಾ ಪ್ರಧಾನ ಕಾರ್ಯಾಲಯದಲ್ಲಿ ಅಥವಾ, ಅವರು ಒಂದು ಅಧೀನ ಕಾರ್ಯಾಲಯವು ಸಹ ಇರುವ ಸ್ಥಳದಲ್ಲಿ ಉದ್ಭವಿಸುವ ಯಾವುದೇ ವ್ಯಾಜ್ಯ ಕಾರಣದ ಸಂಬಂಧದಲ್ಲಿ, ಅಂಥ ಸ್ಥಳದಲ್ಲಿ ವ್ಯವಹಾರವನ್ನು ನಡೆಸುತ್ತಿದೆಯೆಂದು ಭಾವಿಸತಕ್ಕದ್ದು ಎಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

17. ಸಿವಿಲ್ ಪ್ರಕ್ರಿಯಾ ಸಂಹಿತೆಯ 20ನೇ ಪ್ರಕರಣದ (ಎ), (ಬಿ) ಹಾಗೂ (ಸಿ) ಖಂಡಗಳ ವ್ಯಾಪ್ತಿ ಹಾಗೂ ತತ್ವಗಳು ಪರಸ್ಪರ ಸ್ವತಂತ್ರವಾಗಿರುತ್ತವೆ. 20(ಎ) ಹಾಗೂ (ಬಿ) ಪ್ರಕರಣಗಳ ಮುಖ್ಯವಾದ ತತ್ವವೆಂದರೆ ಪ್ರತಿವಾದಿಯು ದಾವೆಯನ್ನು ಅನುಚಿತ ತೊಂದರೆಯಿಲ್ಲದೆ ಪ್ರತಿವಾದಿಸಬಹುದಾದಲ್ಲಿ ದಾವೆಯನ್ನು ಆರಂಬಿಸಬೇಕೆಂಬುದಾಗಿರುತ್ತದೆ.

18. ಅಪೀಲುದಾರರ ಪರ ಮಾನ್ಯ ವಕೀಲರು, ಸಿವಿಲ್ ಪ್ರಕ್ರಿಯಾ ಸಂಹಿತೆಯ 20ನೇ ಪ್ರಕರಣದ ಉಪಬಂಧಗಳ ಹಿನ್ನಲೆಯಲ್ಲಿ, ಬೆಂಗಳೂರಿನಲ್ಲಿರುವ ನ್ಯಾಯಾಲಯವು, ಪಕ್ಷಕಾರರ ನಡುವೆ ಮಾಡಿಕೊಂಡ ಒಪ್ಪಂದ ಅಂದರೆ ಒಪ್ಪಂದದ 29ನೇ ಖಂಡದ ನಿಂಬಂಧನೆಗಳಿನುಸಾರವಾಗಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆಂದು ಸತತವಾಗಿ ವಾದಿಸಿರುತ್ತಾರೆ. ಸದರಿ ಒಪ್ಪಂದ ಪತ್ರವನ್ನು ಗುರುತು ಮಾಡದಿದ್ದಾಗ್ಯೂ, ಕ್ಯಾನ್‌ಕಾರ್ಡ್ ವೀಸಾ 1994ರ ನಿರ್ವಹಣೆಯ ಒಪ್ಪಂದದ ನಿಬಂಧನೆ ಹಾಗೂ ಷರತ್ತುಗಳ ಅನುಸರಣೆಯ ಮೂಲಕ, ಕಾರ್ಡ್ ವಿತರಕ ಬ್ಯಾಂಕು, ತನ್ನ ಇಚ್ಛೆಗನುಗುಣವಾಗಿ, ಕಾರ್ಡ್‌ಧಾರಕನ ವಿರುದ್ಧ, ಆತನು ವಾಸಿಸುತ್ತಿರುವ ಅಥವಾ ವ್ಯವಹಾರ ನಡೆಸುತ್ತಿರುವ ಅಥವಾ ಜೀವನೋಪಾಯಕ್ಕಾಗಿ ಕಾರ್ಯನಿರ್ವಹಿಸುತ್ತಿರುವ ಅಥವಾ ಕಾರ್ಡ್ ವಿತರಕ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಆತ/ಆಕೆ/ಅದರ ಲೆಕ್ಕ ಖಾತೆಯನ್ನು ನಿರ್ವಹಿಸುವ ಅಥವಾ ಕಾರ್ಡ್ ವಿತರಕ ಬ್ಯಾಂಕಿನ ಕೇಂದ್ರ ಕಚೇರಿಯಿರುವ ನಗರದಲ್ಲಿ ಕಾರ್ಡ್ ಧಾರಕನ ವಿರುದ್ಧ ಅಂಥ ಯಾವುದೇ ದಾವೆ ಅಥವಾ ನಡಾವಳಿಗಳನ್ನು ಆರಂಭಿಸಬಹುದೆಂಬುದನ್ನು ಇದು ಸ್ಪಷ್ಟಪಡಿಸುತ್ತದೆಯೆಂದು ನಿವೇದಿಸಿದ್ದಾರೆ.

19. ಪಕ್ಷಕಾರರ ನಡುವೆ ಒಪ್ಪಂದವಾಗಿದೆಯೆಂದು ಭಾವಿಸಿದಾಗ್ಯೂ, ಇದು, ಭಾರತ ಕರಾರು ಅಧಿನಿಯಮದ 28ನೇ ಪ್ರಕರಣದ ಉಪಬಂಧಗಳಿಗೆ ವಿರುದ್ಧವಾಗಿರುತ್ತದೆ, ಅದನ್ನು ಈ ಮುಂದಿನಂತೆ ಓದಲಾಗಿರುತ್ತದೆ:

> "28. ಕಾನೂನಿನ ವ್ಯವಹರಣೆಗಳನ್ನು ಪ್ರತಿಬಂಧಿಸುವ ಒಪ್ಪಂದಗಳು, ಶೂನ್ಯವಾಗಿರುತ್ತವೆ – ಒಂದು ಒಪ್ಪಂದದ,–
>
> *(ಎ) ಪಕ್ಷಕಾರನು ಯಾವುದೇ ಕರಾರಿನ ಮೇರೆಗೆ ಅಥವಾ ಅದರ ಸಂಬಂಧದಲ್ಲಿ ತನ್ನ ಹಕ್ಕುಗಳನ್ನು ಸಾಮಾನ್ಯ ನ್ಯಾಯಾಧಿಕರಣಗಳಲ್ಲಿ ಕಾನೂನು ವ್ಯವಹರಣೆಗಳ ಮೂಲಕ ಚಲಾಯಿಸದಂತೆ ಪ್ರತಿಬಂಧಿಸುವ ಅಥವಾ ಅವನು ತನ್ನ ಹಕ್ಕುಗಳನ್ನು ಹಾಗೆ ಚಲಾಯಿಸುವುದಕ್ಕೆ ಇರುವ ಕಾಲ ಪರಿಮಿತಿಯನ್ನು ಕಡಿಮೆ ಮಾಡುವ ಪ್ರತಿಯೊಂದು ಒಪ್ಪಂದವೂ, ಅಷ್ಟರಮಟ್ಟಿಗೆ ಶೂನ್ಯವಾಗಿರುತ್ತದೆ.*
>
> *ಬಿ) ಒಂದು ಒಪ್ಪಂದದ ಪಕ್ಷಕಾರನು, ತನ್ನ ಹಕ್ಕುಗಳನ್ನು ಹಾಗೆ ಚಲಾಯಿಸದಂತೆ ನಿರ್ದಿಷ್ಟ ಅವಧಿ ಮೀರಿದ ಮೇಲೆ ಯಾವುದೇ ಕರಾರಿನ ಮೇರೆಗೆ ಅಥವಾ ಅದರ ಸಂಬಂಧದಲ್ಲಿ, ಅದರ ಯಾರೇ ಪಕ್ಷಕಾರನ ಹಕ್ಕುಗಳನ್ನು ಅಂತ್ಯಗೊಳಿಸುವಂಥ ಅಥವಾ ಯಾರೇ ಪಕ್ಷಕಾರರ ಯಾವುದೇ ಹೊಣೆಗಾರಿಕೆಯನ್ನು ನಿರ್ವಹಿಸುವಂಥ ಪ್ರತಿಯೊಂದು ಒಪ್ಪಂದವೂ, ಅಷ್ಟರಮಟ್ಟಿಗೆ ಶೂನ್ಯವಾಗಿರುತ್ತದೆ.*
>
> ***ಅಪವಾದ 1:*** *ಉದ್ಭವಿಸಬಹುದಾದ ವಿವಾದವನ್ನು ಮಧ್ಯಸ್ಥಗಾರಿಕೆಗೆ ಒಪ್ಪಿಸಲು ಮಾಡಿಕೊಂಡ ಕರಾರಿನ ಉಳಿಸುವಿಕೆ – ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ಯಾವುದೇ ವಿಷಯದ ಅಥವಾ ವಿಷಯಗಳ ವರ್ಗದ ಸಂಬಂಧದಲ್ಲಿ ತಮ್ಮ ನಡುವೆ ಉದ್ಭವಿಸಬಹುದಾದ ಯಾವುದೇ ವಿವಾದವನ್ನು ಮಧ್ಯಸ್ಥಗಾರಿಕೆಗೆ ಒಪ್ಪಿಸತಕ್ಕುದೆಂದು ಮತ್ತು ಅಂತಹ ಮಧ್ಯಸ್ಥಗಾರಿಕೆಯಲ್ಲಿ ಕೊಡಬೇಕೆಂದು*

*ತೀರ್ಮಾನವಾದ ಮೊಬಲಗು ಮಾತ್ರವೇ ಹಾಗೆ ಒಪ್ಪಿಸಲಾದ ವಿವಾದದ ಸಂಬಂಧದಲ್ಲಿ ವಸೂಲೀಯುವಾಗಿರತಕ್ಕದ್ದು ಎಂದು ಮಾಡಿಕೊಂಡ ಒಂದು ಕರಾರನ್ನು ಈ ಪ್ರಕರಣವು ಕಾನೂನು ಬಾಹಿರವಾಗಿಸತಕ್ಕದ್ದಲ್ಲ.*

***ಅಪವಾದ 2:*** *ಈಗಾಗಲೇ ಉದ್ಭವಿಸಿರುವ ಪ್ರಶ್ನೆಗಳನ್ನು ಮಧ್ಯಸ್ಥಗಾರಿಕೆಗೆ ಒಪ್ಪಿಸಲು ಮಾಡಿಕೊಂಡ ಕರಾರಿನ ಉಳಿಸುವಿಕೆ.– ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳು ತಮ್ಮ ನಡುವೆ ಈಗಾಗಲೇ ಉದ್ಭವಿಸಿರುವ ಯಾವುದೇ ಪ್ರಶ್ನೆಯನ್ನು ಮಧ್ಯಸ್ಥಗಾರಿಕೆಗೆ ಒಪ್ಪಿಸಲು ಮಾಡಿಕೊಂಡಿರುವ ಲಿಖಿತ ಕರಾರನ್ನು ಈ ಪ್ರಕರಣವು ಕಾನೂನು ಬಾಹಿರವಾಗಿಸತಕ್ಕದ್ದಲ್ಲ ಅಥವಾ ಮಧ್ಯಸ್ಥಗಾರಿಕೆಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಯಾವುದೇ ಉಪಬಂಧವನ್ನು ಬಾಧಿಸತಕ್ಕದ್ದಲ್ಲ.*

***ಅಪವಾದ 3:*** *ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳ ಖಾತರಿ ಕರಾರಿನ ಉಳಿಸುವಿಕೆ.– ಬ್ಯಾಂಕ್ ಅಥವಾ ಹಣಕಾಸು ಸಂಸ್ಥೆಗಳು, ಸದರಿ ಹೊಣೆಗಾರಿಕೆಗಳಿಂದ ಅಂಥ ಪಕ್ಷಕಾರರನ್ನು ಮುಕ್ತಗೊಳಿಸುವುದಕ್ಕೆ ಅಥವಾ ಬಿಡುಗಡೆಗೊಳಿಸುವುದಕ್ಕೆ ಸಂಬಂಧಿಸಿದಂತೆ ನಿರ್ದಿಷ್ಟಪಡಿಸಿದ ಘಟನೆಯು ಸಂಭವಿಸಿದ ಅಥವಾ ಸಂಭವಿಸದಿರುವ ದಿನಾಂಕದಿಂದ ಒಂದು ವರ್ಷಕ್ಕಿಂತ ಕಡಿಮೆಯಿರದಂಥ ನಿರ್ದಿಷ್ಟಪಡಿಸಿದ ಅವಧಿ ಮೀರಿದ ಮೇಲೆ ಅಂಥ ಖಾತರಿಯ ಅಥವಾ ಕರಾರಿನ ಮೇರೆಗೆ ಅಥವಾ ಸಂಬಂಧದಲ್ಲಿ ಯಾವುದೇ ಹೊಣೆಗಾರಿಕೆಯಿಂದ ಅದರ ಯಾರೇ ಪಕ್ಷಕಾರನ ಹಕ್ಕುಗಳನ್ನು ಅಂತ್ಯಗೊಳಿಸುವುದಕ್ಕೆ ಅಥವಾ ಬಿಡುಗಡೆಗೊಳಿಸುವುದಕ್ಕೆ ಸಂಬಂಧಿಸಿದಂತೆ ಉಪಬಂಧ ಕಲ್ಪಿಸಿಕೊಳ್ಳಲು ಖಾತರಿಯಲ್ಲಿ ಅಥವಾ ಯಾವುದೇ ಕರಾರಿನಲ್ಲಿ ಅವಧಿಯನ್ನು ನಿರ್ದಿಷ್ಟ ಪಡಿಸಿಕೊಳ್ಳಲು*

*ಲಿಖಿತದಲ್ಲಿ ಮಾಡಿಕೊಂಡಿರುವ ಕರಾರನ್ನು ಈ ಪ್ರಕರಣವು ಕಾನೂನು ಬಾಹಿರವಾಗಿಸತಕ್ಕದಲ್ಲ.*

***ವಿವರಣೆ:–***

*i) 3ನೇ ಅಪವಾದದಲ್ಲಿ ಬ್ಯಾಂಕ್ ಎಂದರೆ–*

*(ಎ) ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 (1949ರ 10) 5ನೇ ಪ್ರಕರಣದ(ಸಿ) ಖಂಡದಲ್ಲಿ ಪರಿಭಾಷಿಸಲಾದಂಥ "ಬ್ಯಾಂಕಿಂಗ್ ಕಂಪನಿ".*

*(ಬಿ) ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 (1949 ರ 10) 5ನೇ ಪ್ರಕರಣದ (ಡಿಎ) ಖಂಡದಲ್ಲಿ ಪರಿಭಾಷಿಸಲಾದಂಥ "ಒಂದು ಸಂವಾದಿ ಹೊಸ ಬ್ಯಾಂಕ್".*

*(ಸಿ) ಭಾರತೀಯ ಸ್ಟೇಟ್ ಬ್ಯಾಂಕ್ ಅಧಿನಿಯಮ, 1955(1955ರ 23)ರ 3ನೇ ಪ್ರಕರಣದಡಿಯಲ್ಲಿ ರಚಿತವಾದ "ಭಾರತೀಯ ಸ್ಟೇಟ್ ಬ್ಯಾಂಕ್".*

*(ಡಿ) "ಭಾರತೀಯ ಸ್ಟೇಟ್ ಬ್ಯಾಂಕ್" (ಸಬ್ಸೀಡರಿ ಬ್ಯಾಂಕುಗಳ) ಅಧಿನಿಯಮ, 1959 (1959 ರ 38)ರ 2ನೇ ಪ್ರಕರಣದ (ಕೆ) ಖಂಡದಲ್ಲಿ ಪರಿಭಾಷಿಸಲಾದಂಥ" ಒಂದು ಸಬ್ಸೀಡರಿ ಬ್ಯಾಂಕ್.*

*(ಇ) ಪ್ರಾದೇಶಿಕ ಗ್ರಾಮೀಣ ಬ್ಯಾಂಕು ಅಧಿನಿಯಮದ, 1976 (1976 ರ 21) ರ 3ನೇ ಪ್ರಕರಣದಡಿಯಲ್ಲಿ ಸ್ಥಾಪಿಸಲಾದ "ಒಂದು ಪ್ರಾದೇಶಿಕ ಗ್ರಾಮೀಣ ಬ್ಯಾಂಕ್".*

*(ಎಫ್) ಬ್ಯಾಂಕಿನ ವಿನಿಯಮನ ಅಧಿನಿಯಮ, 1949 (1949 ರ 10)ರ 5ನೇ ಪ್ರಕರಣದ (ಸಿಸಿಐ) ಖಂಡದಲ್ಲಿ ಪರಿಭಾಷಿಸಲಾದಂತೆ "ಒಂದು ಸಹಕಾರಿ ಬ್ಯಾಂಕ್"*

*(ಜಿ) ಬ್ಯಾಂಕಿಂಗ್ ವಿನಿಯಮನ ಅಧಿನಿಯಮ, 1949 (1949ರ 10) ಕೆ 5ನೇ ಪ್ರಕರಣದ (ಸಿಸಿiiiಐ) ಖಂಡದಲ್ಲಿ ಪರಿಭಾಷಿಸಲಾದಂತೆ"ಒಂದು ಬಹು–ರಾಜ್ಯ ಸಹಕಾರಿ ಬ್ಯಾಂಕ್; ಹಾಗೂ*

(ii) ಅಪವಾದ 3 ರಲ್ಲಿನ "ಒಂದು ಹಣಕಾಸು ಸಂಸ್ಥೆ" ಎಂದರೆ ಕಂಪನಿಗಳ ಅಧಿನಿಯಮ, 1956 (1956 ರ 1)ರ 4ಎ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಬರುವ ಯಾವುದೇ ಸಾರ್ವಜನಿಕ ಹಣಕಾಸು ಸಂಸ್ಥೆ.

20. ಭಾರತ ಕರಾರು ಆಧಿನಿಯಮದ ಮೇಲೆ ಹೇಳಿದ ಉಪಬಂಧಗಳ ಹಿನ್ನಲೆಯಲ್ಲಿ, ಸಿವಿಲ್ ಪ್ರಕ್ರಿಯಾ ಸಂಹಿತೆಯ 20ನೇ ಪ್ರಕರಣದ ಉಪಬಂಧಗಳಡಿಯಲ್ಲಿ ಹೊಂದಿರದ ಅನ್ಯಥಾ ಕರಾರಿನ ಮೂಲಕ ಯಾವುದೇ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯನ್ನು ಪ್ರದತ್ತಗೊಳಿಸಲು ಪಕ್ಷಕಾರರು ಮುಕ್ತವಾಗಿರುವುದಿಲ್ಲವೆಂಬುದು ಸ್ಪಷ್ಟವಾಗುತ್ತದೆ. ಪಕ್ಷಕಾರರು, ಅಧಿಕಾರ ವ್ಯಾಪ್ತಿಯನ್ನು ಹೊಂದಿರದಂಥ ನ್ಯಾಯಾಲಯದಲ್ಲಿ ನಿಹಿತವಾದ ಅಧಿಕಾರ ವ್ಯಾಪ್ತಿಗೆ ಒಪಿಕೊಳ್ಳಲಾಗುವುದಿಲ್ಲ. ಅಂಥ ಕರಾರು, ಪರಿನಿಯಮಗಳಿಗೆ ವಿರುದ್ಧವಾಗಿದ್ದು, ಭಾರತ ಕರಾರು ಅಧಿನಿಯಮದ 23 ಹಾಗೂ 28ನೇ ಪ್ರಕರಣಗಳ ಉಪಬಂಧಗಳ ಮೂಲಕ ಬಾಧಕವಾಗಿರುತ್ತದೆ.

21. ನನ್ನ ಅಭಿಪ್ರಾಯವನ್ನು, ***ಮೆ. ಪಟೇಲ್ ರೋಡ್ ವೇಸ್ – ವಿರುದ್ಧ – ಮೆ. ಪ್ರಸಾದ್ ಟ್ರೇಡಿಂಗ್ ಕಂಪನಿ ಲಿ.***[1], ಪ್ರಕರಣದಲ್ಲಿನ ಮಾನ್ಯ ಸರ್ವೋಚ್ಚ ನ್ಯಾಯಾಲಯದ

1. ಎಐಆರ್ 1992ರ ಎಸ್‌ಸಿ 1514

ತೀರ್ಪು ಸಮರ್ಥಿಸುತ್ತದೆ. ಸದರಿ ತೀರ್ಪಿನ 9, 12, 13, 14 ಹಾಗೂ 15ನೇ ಪ್ಯಾರಗಳು ಈ ಮುಂದಿನಂತಿವೆ:

*"9. ಯಾರ ಅಧಿಕಾರ ವ್ಯಾಪ್ತಿಯ ಸ್ಥಳೀಯ ಮಿತಿಯೊಳಗೆ ಪ್ರತಿವಾದಿಯು ಇತರ ವಿಷಯಗಳೊಂದಿಗೆ ಕಾರ್ಯ ನಿರ್ವಹಿಸುತ್ತಿರುತ್ತಾನೋ, ಅದೇ ಅಧಿಕಾರ ವ್ಯಾಪ್ತಿಯ ಸ್ಥಳೀಯ ಮಿತಿಯೊಳಗೆ ನ್ಯಾಯಾಲಯಕ್ಕೆ ಇತರ ವಿಷಯಗಳೊಂದಿಗೆ 20ನೇ ಪ್ರಕರಣದ (ಎ) ಹಾಗೂ (ಬಿ) ಖಂಡಗಳು ಅನ್ವಯವಾಗುತ್ತವೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ (ಸಿ)ಖಂಡವು, ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ವ್ಯಾಜ್ಯ ಕಾರಣವು ಯಾರ ಅಧಿಕಾರ ವ್ಯಾಪ್ತಿಯು ಸ್ಥಳೀಯ ಮಿತಿಯೊಳಗೆ ಬರುತ್ತದೋ ಅಂಥ ನ್ಯಾಯಾಲಯಕ್ಕೆ ಅನ್ವಯವಾಗುತ್ತದೆ. ವ್ಯಾಜ್ಯ ಕಾರಣವು ಸಂಪೂರ್ಣವಾಗಿ ಅಥವಾ ಭಾಗಶಃವಾಗಿ ಬಾಂಬೆಯಲ್ಲಿ ಉದ್ಭವಿಸುತ್ತೆಂದು ಅಪೀಲುದಾರರ ಪರವಾಗಿ ನಮ್ಮ ಮುಂದೆ ವಾದಿಸಿರುವುದಿಲ್ಲ. ತದನುಸಾರವಾಗಿ, (ಸಿ) ಖಂಡವು ಈ ಪ್ರಕರಣಗಳ ವಾಸ್ತವಾಂಶಗಳಿಗೆ ಅನ್ವಯವಾಗುವುದಿಲ್ಲ. ಸಂಹಿತೆಯ 20ನೇ ಪ್ರಕರಣದ ವಿವರಣೆಯ ನೆರವಿನೊಂದಿಗೆ ಏನನ್ನು ವಾದಿಸಲಾಯಿತೆಂದರೆ, ಅಪೀಲುದಾರನು ಬಾಂಬೆಯಲ್ಲಿ ತನ್ನ ಪ್ರಧಾನ ಕಚೇರಿಯನ್ನು ಹೊಂದಿರುವುದರಿಂದ ಬಾಂಬೆಯಲ್ಲಿ ವ್ಯವಹಾರವನ್ನು ನಿರ್ವಹಿಸಬೇಕೆಂದು ಭಾವಿಸತಕ್ಕದೆಂದು ಹಾಗೂ ತದನುಸಾರವಾಗಿ ಬಾಂಬೆಯಲ್ಲಿರುವ ನ್ಯಾಯಾಲಯಗಳು ಅಧಿಕಾರವ್ಯಾಪ್ತಿಯನ್ನು ಹೊಂದಿರುತ್ತವೆಂಬುದಾಗಿರುತ್ತದೆ, ನಮಗೆ ಸಂಹಿತೆಯ 20ನೇ ಪ್ರಕರಣದ ವಿವರಣೆಯ ಸಾದಾ ಓದಿನಿಂದ, ಮೇಲಿನ ವಾದದಲ್ಲಿ ಎದ್ದು ಕಾಣುವ ಕುತರ್ಕ ಕಂಡುಬರುತ್ತದೆ. ವಿವರಣೆಯು ಎರಡು ಭಾಗಗಳಲ್ಲಿದ್ದು, ಒಂದು 'ಭಾರತದಲ್ಲಿನ ಕಚೇರಿ' ಎಂಬ ಪದಗಳು ಹಾಗೂ 'ಸಂಬಂಧದಲ್ಲಿ' ಎಂಬ ಪದಗಳ ನಡುವಿನ 'ಅಥವಾ'ಪದದ*

ಎದುರಿನದಾಗಿದ್ದು, ಮತ್ತೊಂದು ಆ ತರುವಾಯದ್ದಾಗಿರುತ್ತದೆ. ವಿವರಣೆಯು ಮೇಲೆ ಕಂಡುಬಂದಂತೆ ಪರಿಭಾಷಿಸಲಾದಂಥ ನಿಗಮವಾಗಿರುವಂಥ ಪ್ರತಿವಾದಿಗೆ ಅನ್ವಯವಾಗುತ್ತಿದ್ದು ಇದು ಪ್ರಸ್ತುತ ಪ್ರಕರಣದಲ್ಲಿ ಅಪೀಲುದಾರನಾಗಿರುವಂಥ ಕಂಪನಿಯನ್ನು ಒಳಗೊಳ್ಳುತ್ತದೆ. ವಿವರಣೆಯ ಮೊದಲ ಭಾಗವು, ತನ್ನ ಒಂದೇ ಅಥವಾ ಪ್ರಧಾನ ಕಚೇರಿಯನ್ನು ನಿರ್ದಿಷ್ಟ ಸ್ಥಳದಲ್ಲಿ ಹೊಂದಿರುವಂಥ ನಿಗಮಕ್ಕೆ ಮಾತ್ರ ಅನ್ವಯವಾಗುತ್ತದೆ. ಈ ಸಂದರ್ಭದಲ್ಲಿ ಪ್ರತಿವಾದಿಯ ಒಂದೇ ಅಥವಾ ಪ್ರಧಾನ ಕಚೇರಿಗಳು ಯಾವ ನ್ಯಾಯಾಲಯಗಳ ವ್ಯಾಪ್ತಿಗೆ ಬರುತ್ತದೋ, ಅಂಥ ನ್ಯಾಯಾಲಯಗಳು, ಪ್ರತಿವಾದಿ ನಿರ್ದಿಷ್ಟವಾಗಿ ಅಂಥ ಸ್ಥಳದಲ್ಲಿ ವ್ಯವಹಾರವನ್ನು ನಿರ್ವಹಿಸದಿದ್ದಲ್ಲಿ ಕೂಡ "ಅಲ್ಲಿಯೇ ವ್ಯವಹಾರ ನಿರ್ವಹಿಸುತ್ತಿದ್ದಾನೆಂದು" ಭಾವಿಸಬೇಕೆಂಬ ಅರ್ಥವನ್ನು ವಿವರಣೆಯು ಸೃಜಿಸಿರುವುದರಿಂದ ಆ ನ್ಯಾಯಾಲಯವು ಆಂಥ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ. ವಿವರಣೆಯ ನಂತರದ ಭಾಗವು ಎಲ್ಲಿ ಪ್ರತಿವಾದಿಯು ಒಂದೇ ಕಚೇರಿಯನ್ನು ಹೊಂದಿರದೆ ಆದರೆ ಒಂದು ಕಡೆ ಪ್ರಧಾನ ಕಚೇರಿಯನ್ನು, ಮತ್ತೊಂದು ಕಡೆ ಅಧೀನ ಕಚೇರಿಗಳನ್ನು ಹೊಂದಿರುತ್ತಾನೊ ಅಂಥ ಸಂದರ್ಭವನ್ನು ವಿವರಿಸುತ್ತದೆ. "ಅಂಥ ಸ್ಥಳದಲ್ಲಿ" ಎಂಬ ಪದಗಳು ವಿವರಣೆಯ ಕೊನೆಯ ಭಾಗದಲ್ಲಿ ಬರುತ್ತವೆ ಹಾಗೂ 'ಅಥವಾ' ಪದವು ವಿವರಣೆಯ ನಂತರದ ಭಾಗದೊಳಗೆ ಪ್ರಕರಣವು ಬರುವಂತಹುದಾಗಿದ್ದಲ್ಲಿ, ಪ್ರತಿವಾದಿಯ ಪ್ರಧಾನ ಕಚೇರಿಯು ಯಾವ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಬರದಿರುವೆಡೆ ಇರುತ್ತದೋ ಆದರೆ ಅಲ್ಲಿನ ಕಚೇರಿಯನ್ನು ಹೊಂದಿರುವ ಕಡೇ ಯಾವುದೇ ಸ್ಥಳದಲ್ಲಿ ಯಾವುದೇ ವ್ಯಾಜ್ಯಕಾರಣ ಉದ್ಭವಿಸಿದಲ್ಲಿ ಆತನ ಅಧೀನ ಕಚೇರಿಯು ಒಳಗೊಳ್ಳುವ ಅಧಿಕಾರ ವ್ಯಾಪ್ತಿಯನ್ನು ಆ ನ್ಯಾಯಾಲಯವು ಹೊಂದಿರತಕ್ಕದ್ದು ಎಂದು ಸ್ಪಷ್ಟವಾಗಿ ವಿಭಜಿಸಿ ಅನ್ವಯವಾಗುತ್ತದೆ".

*"12. ಪ್ರಶ್ನಿತ ಉಪಬಂಧವನ್ನು ಕುರಿತಂತೆ ಅಪೀಲುದಾರನು ಮಂಡಿಸಬೇಕೆಂದು ಕೋರಿದ ಅರ್ಥ ವಿವರಣೆಯು, ಸಂಪೂರ್ಣವಾಗಿ ಅತಿಯಾದುದಾಗಿದೆಯೆಂದು ವಿವರಿಸಿದೆಯೆಂಬುದನ್ನು ನಾವು ಇಲ್ಲಿ ಪ್ರಸ್ತಾಪಿಸಲು ಇಚ್ಛಿಸುತ್ತೇವೆ. ವಿಧಾನಮಂಡಲವು ಈ ಸಂಬಂಧದಲ್ಲಿ ಹೇಳಲಾದಂತೆ ಇದರ ಉದ್ದೇಶವು, ಒಂದೇ ಅಥವಾ ಪ್ರಧಾನ ಕಚೇರಿ (ಆ ಸ್ಥಳದಲ್ಲಿ ನಿಗಮವು ವ್ಯವಹಾರವನ್ನು ನಿರ್ವಹಿಸುತ್ತಿರಲಿ ಅಥವಾ ನಿರ್ವಹಿಸದಿರಲಿ) ಅಥವಾ ವ್ಯಾಜ್ಯ ಕಾರಣವು ಉದ್ಭವಿಸುವ ಯಾವುದೇ ಇತರ ಸ್ಥಳದಲ್ಲಿ ನಿಗಮದ ವಿರುದ್ಧ ದಾವೆಯನ್ನು ಆರಂಭಿಸಬೇಕೆಂಬುದಾಗಿದ್ದಲ್ಲಿ, ವಿವರಣೆಯ ಮೊದಲ ಭಾಗದೊಂದಿಗೆ (ಎ), (ಬಿ) ಹಾಗೂ (ಸಿ)ಖಂಡಗಳ ಉಪಬಂಧಗಳು ಸಂಪೂರ್ಣವಾಗಿ ಉದ್ದೇಶವನ್ನು ಈಡೇರಿಸಿಕೊಂಡಿರುತ್ತವೆ. ವಾಸ್ತವವಾಗಿ ಪರಿಣಾಮವು ವ್ಯಾಪಕವಾಗಿರುತ್ತದೆ. ದಾವೆಯನ್ನು ಪ್ರಧಾನ ಕಚೇರಿಯ (ವಾಸ್ತವಿಕ ವ್ಯವಹಾರವನ್ನು ಅಲ್ಲಿ ನಿರ್ವಹಿಸುತ್ತಿರಲಿ ಅಥವಾ ನಿರ್ವಹಿಸದಿರಲಿ) ಇರುವುದರಿಂದಾಗಿ ಅಂಥ ಸ್ಥಳದಲ್ಲಿ ಆರಂಭಿಸಲಾಗಿರುತ್ತದೆ. ಪರ್ಯಾಯವಾಗಿ, ಒಂದು ದಾವೆಯನ್ನು (ಸಿ) ಖಂಡ (ನಿಗಮವು ಅಂಥ ಸ್ಥಳದಲ್ಲಿ ಅಧೀನ ಕಚೇರಿಯನ್ನು ಹೊಂದಿರಲಿ ಅಥವಾ ಹೊಂದಿರದಿರಲಿ) ದಡಿಯಲ್ಲಿ ವ್ಯಾಜ್ಯ ಕಾರಣವು ಉದ್ಭವಿಸುವ ಸ್ಥಳದಲ್ಲಿ ಆರಂಭಿಸಬಹುದಾಗಿರುತ್ತದೆ. ಅದ್ದರಿಂದ ಇದು ವಿವರಣೆಯು ಉದ್ದೇಶವಾಗಿರುವುದಿಲ್ಲ. ವಿವರಣೆಯು ವಾಸ್ತವವಾಗಿ (ಎ) ಖಂಡದ ವಿವರಣೆಯಾಗಿರುತ್ತದೆ. ಇದು (ಎ)ಖಂಡದ ವ್ಯಾಪ್ತಿಯನ್ನು ಅಂದರೆ, ನಿಗಮವು ವ್ಯವಹರಣೆಯನ್ನು ನಿರ್ವಹಿಸಬಹುದೆಂದು ಹೇಳಬಹುದಾದ ಸ್ಪಷ್ಟನೆಯ ಸ್ವರೂಪದಲ್ಲಿರುತ್ತದೆ. ನಿಗಮದ ಅಧೀನ ಕಚೇರಿಯು ಅಂಥ ಸ್ಥಳದಲ್ಲಿ ಇರುವವರೆಗೂ ಇದು ಪ್ರಧಾನ ಕಚೇರಿಯು (ಅಲ್ಲಿ ವಾಸ್ತವವಾಗಿ ವ್ಯವಹಾರವನ್ನು ನಿರ್ವಹಿಸುತ್ತಿರಲಿ ಅಥವಾ ನಿರ್ವಹಿಸದಿರಲಿ ಇರುವಂಥ ಸ್ಥಳವಾಗಿರುತ್ತದೆ ಅಥವಾ ವ್ಯವಹರಣೆಯನ್ನು ನಿರ್ವಹಿಸುವೆಡೆಯಲ್ಲಿ ವ್ಯಾಜ್ಯಕಾರಣವು ಉದ್ಭವಿಸಿದ*

ಸ್ಥಳವಾಗಿರುತ್ತದೆ. (ನಿಗಮದ ಪ್ರಧಾನ ಕಚೇರಿಯು ಅಲ್ಲಿ ಇಲ್ಲದಿದ್ದರೂ ಕೂಡ) ಅಧೀನ ಕಚೇರಿಯು ಇರುವ ಸ್ಥಳದೊಂದಿಗೆ ವ್ಯಾಜ್ಯ ಕಾರಣವು ಉದ್ಭವಿಸಿದ ಸ್ಥಳವು ಸೇರಿಕೊಂಡಿದ್ದಲ್ಲಿ ಇದು, (ಬಿ)ಖಂಡದ ಉದ್ದೇಶಕ್ಕೆ ಸಂಬಂಧಿಸಿದಂತೆ ನಿಗಮದ ಸಂದರ್ಭದಲ್ಲಿ ಅಧೀನ ಕಚೇರಿಯ ಸ್ಥಳವು, ವ್ಯಾಜ್ಯ ಕಾರಣವು ಉದ್ಭವಿಸಿದ ಸ್ಥಳೀಯ ಮಿತಿಯೊಳಗಿದ್ದರೆ, ಅದು ದಾವೆಯನ್ನು ಸಲ್ಲಿಸಲು ಯುಕ್ತವಾದ ಸ್ಥಳವಾಗಿರುತ್ತದೆಯೇ ಹೊರತು ವ್ಯವಹಾರದ ಪ್ರಧಾನ ಸ್ಥಳವಾಗಿರುವುದಿಲ್ಲವೆಂಬುದು ವಿಧಾನಮಂಡಲದ ಉದ್ದೇಶವಾಗಿರುತ್ತದೆಂಬುದನ್ನು ಸ್ಪಷ್ಟಪಡಿಸುತ್ತದೆ. ಉದ್ದೇಶವು ಅದಾಗಿದ್ದಲ್ಲಿ, ಅಧೀನ ಅಥವಾ ಪ್ರಧಾನ ಕಚೇರಿಗಳ ಸ್ಥಳಗಳು (ವ್ಯಾಜ್ಯ ಕಾರಣಗಳು ಉದ್ಭವಿಸಿದ ಮಿತಿಗಳೊಳಗೆ) ವ್ಯವಹರಣೆಗಳನ್ನು ಸ್ಥಳಗಳಾಗಿರಬೇಕೆಂದು ಭಾವಿಸಬಹುದಾಗಿದ್ದಲ್ಲಿ, ವಿಭಜನ ಸೂಚಕವಾದ 'ಅಥವಾ' ಎಂಬ ಪದವು ಅಲ್ಲಿ ಇರುವಂತಿರಲಿಲ್ಲ. ಇದಕ್ಕೆ ಬದಲಾಗಿ, ವಿವರಣೆಯ ಎರಡನೇ ಭಾಗವನ್ನು 'ಮತ್ತು ಯಾವುದೇ ಸ್ಥಳದಲ್ಲಿ ಯಾವುದೇ ವ್ಯಾಜ್ಯಕಾರಣವು ಉದ್ಭವಿಸುವ ಸಂಬಂಧದಲ್ಲಿ, ಅದು ಅಂಥ ಸ್ಥಳದಲ್ಲಿ ಒಂದು ಅಧೀನ ಕಚೇರಿಯನ್ನು ಹೊಂದಿರಬೇಕೆಂದು ಓದಿಕೊಳ್ಳಬೇಕಾಗಿರುತ್ತದೆ'.

13. ನಾವು ಕಾಣಬಹುದಾದಷ್ಟರ ಮಟ್ಟಿಗೆ, ಈ ಪ್ರಕರಣವನ್ನು ಕುರಿತು ನಾವು ಮಂಡಿಸಬಹುದಾದಂಥ ಅರ್ಥವಿವರಣೆಯು ಯಾವುದೇ ಪ್ರಾಯೋಗಿಕ ಅಥವಾ ಅನುಚಿತ ತೊಂದರೆಗಳನ್ನಾಗಲಿ ಅಥವಾ ವಾದಿಗೆ ಅಥವಾ ಪ್ರತಿವಾದಿ ನಿಗಮಕ್ಕೆ ಅನಾನುಕೂಲತೆಗಳನ್ನಾಗಲೀ ಸೃಜಿಸುವುದಿಲ್ಲ. ಸಾಮಾನ್ಯವಾಗಿ (ಎ) ಯಿಂದ (ಸಿ) ವರೆಗಿನ ಖಂಡಗಳಲ್ಲಿ ವಾದಿಯು ಒಂದು ವೇದಿಕೆಯ ಆಯ್ಕೆಯನ್ನು ಹೊಂದಿರುತ್ತಾನೆ ಹಾಗೂ ನಿವಾಸದ ಸ್ಥಳಕ್ಕೆ ಅಥವಾ ನಿಗಮದ ವ್ಯವಹಾರಕ್ಕೆ ಹೋಗುವಂತೆ ಒತ್ತಾಯಿಸುವಂತಿಲ್ಲ ಹಾಗೂ

ವ್ಯಾಜ್ಯಕಾರಣವು ಉದ್ಭವಿಸುವೆಡೆಂಯುಲ್ಲಿ ದಾವೆಂಯುನ್ನು ಸಲ್ಲಿಸಬಹುದೆಂಬುದು ವಾಸ್ತವಾಂಶವಾಗಿರುತ್ತದೆ, ನಿಗಮವು, ಅಲ್ಲಿ ವ್ಯಾಜ್ಯಕಾರಣವು ಉದ್ಭವಿಸುತ್ತದೆಂಬ ಕಾರಣ ಮಾತ್ರದಿಂದಲೇ ಕೆಲವು ಸ್ಥಳಗಳಲ್ಲಿ ವ್ಯಾಜ್ಯವನ್ನು ಲಂಭಿಸುವುದನ್ನು ತಪ್ಪಿಸಲು ಅಪೇಕ್ಷಿಸಿದಲ್ಲಿ, ಬೇರ್ಪಡಿಸುವ ಖಂಡವು ಪ್ರಸ್ತುತ ಪ್ರಕರಣದಲ್ಲಿ ಸೃಜಿಸಿದಂಥ ಪರಿಸ್ಥಿತಿಯಿಂದ ಸ್ವತಃ ಉಳಿಸಬಹುದಾಗಿರುತ್ತದೆ. ಅದಾಗ್ಯೂ, ವಿವರಣೆಯ ಸ್ಪಷ್ಟ ಉದ್ದೇಶವು ನಿಗಮವು, ವ್ಯಾಜ್ಯಕಾರಣವು ಉದ್ಭವಿಸುವ ಸ್ಥಳದಲ್ಲಿ ಅಧೀನ ಕಚೇರಿಯನ್ನು ಹೊಂದಿರುವೆಡೆಯಲ್ಲಿ, ಆ ಸ್ಥಳದಲ್ಲಿ ವ್ಯವಹರಣೆಯನ್ನು ನಿರ್ವಹಿಸಲಾಗುವುದಿಲ್ಲವಾದ್ದರಿಂದ ಅಲ್ಲಿ ದಾವೆಯನ್ನು ಹೂಡಲಾಗುವುದಿಲ್ಲವೆಂದು ಹೇಳಲಾಗುವುದಿಲ್ಲ ವೆಂಬುದಾಗಿರುತ್ತದೆ. ನಿಗಮವು, ವ್ಯಾಜ್ಯ ಕಾರಣವನ್ನು (ವಾದಿಯು ವ್ಯವಹರಣೆಗಳನ್ನು ಹೊಂದಿರುವ ಎಲ್ಲಾ ಸಂಭಾವ್ಯತೆಗಳಿರುವೆಡೆಗಳಲ್ಲಿ) ಉದ್ಭವಿಸುವ ಸ್ಥಳದಲ್ಲಿ ಅಧೀನ ಕಚೇರಿಯನ್ನು ಹೊಂದಿರದಿದ್ದಲ್ಲಿ, ಅಂಥ ವಾದಿಯನ್ನು ನಿಗಮವು ಪ್ರಧಾನ ಕಚೇರಿಯನ್ನು ಹೊಂದಿರುವ ಸ್ಥಳಕ್ಕೆ ಪ್ರಯಾಣಿಸಲು ಒತ್ತಾಯಿಸಬೇಕಾಗುತ್ತದೆಂದು ಅಭಿಪ್ರಾಯ ವ್ಯಕ್ತಪಡಿಸಲು ಕಷ್ಟಕರವಾಗಿರುತ್ತದೆ. ಆ ಸ್ಥಳವು ವಾದಿಗೆ ಅನುಕೂಲಕರವಾಗಿರಬೇಕಾಗುತ್ತದೆ, ಹಾಗೂ ನಿಗಮವು, ಅಂಥ ಸ್ಥಳದಲ್ಲಿ ಕಚೇರಿಯನ್ನು ಹೊಂದಿರುವುದರಿಂದ, ಅಲ್ಲಿ ಯಾವುದೇ ಅನಾನುಕೂಲತೆ ಇರುವುದಿಲ್ಲ, ಹಾಗಾಗಿ ವಿವರಣೆಯು, ನಿಗಮದ ವ್ಯವಹರಣೆಯ ಸ್ಥಳಕ್ಕೆ ಸಂಬಂಧಿಸಿದಂತೆ ಒಂದು ಪರ್ಯಾಯ ಹಕ್ಕನ್ನು ಒದಗಿಸುತ್ತದೆಯೇ ಹೊರತು ಹೆಚ್ಚುವರಿ ಹಕ್ಕಾಗಿರುವುದಿಲ್ಲ.

14. ಅಲ್ಲಿ ಒಂದೇ ಒಂದು ಅಸಾಧಾರಣ ಪರಿಸ್ಥಿತಿ ಇದ್ದಿರಬಹುದಾಗಿದ್ದು, ಅದರಲ್ಲಿ ಈ ಪರಿಭಾಷೆ ಅಸಂಗತವಾಗಿ ಕಂಡುಬರಬಹುದಾಗಿರುತ್ತದೆ. ನಿಗಮವಿರುವೆಡೆಯಲ್ಲಿಯೇ ವಾದಿಯು ವ್ಯವಹಾರವೂ ನಡೆಯುತ್ತಿದ್ದು, ವ್ಯಾಜ್ಯಕಾರಣವು ಬೇರೆ ಜಾಗದಲ್ಲಿ

*ಉದ್ಭವವಾಗಿದೆ. ಮೇಲಿನ ಅರ್ಥ ವಿವರಣೆಯು ಇಬ್ಬರೂ ಪಕ್ಷಕಾರರಿಗೆ ಒಂದೇ ವ್ಯವಹಾರದ ಸ್ಥಳದಲ್ಲಿ ದಾವೆಯನ್ನು ಸಲ್ಲಿಸುವುದರಿಂದ ಅವರನ್ನು ಪ್ರತಿವಾರಿಸಿದ್ದು, ವ್ಯಾಜ್ಯಕಾರಣವು ಉದ್ಭವಿಸುವ ಸ್ಥಳದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನ್ಯಾಯಾಲಯಕ್ಕೆ ಹೋಗಲು ಆತನಿಗೆ ಒತ್ತಾಯಿಸಿರುತ್ತದೆ. ಆದರೆ ವಾಸ್ತವವಾಗಿ, ಇದು ಕಷ್ಟದಾಯಕವಾದುದಾಗಿಲ್ಲ. ಆ ಸ್ಥಳದಲ್ಲಿ ವ್ಯಾಜ್ಯ ಕಾರಣದ ಸ್ವಲ್ಪ ಭಾಗ ಉದ್ಭವಿಸಿರುವುದರಿಂದ ಅಂಥ ವಾದಿಯು, ಆ ಸ್ಥಳದೊಂದಿಗೆ ಸ್ವಲ್ಪ ಮಟ್ಟಿಗಿನ ಸಂಬಂಧ ಅಥವಾ ಸಂಪರ್ಕವನ್ನು ಇಟ್ಟುಕೊಂಡಿರುತ್ತಾನೆ; ವ್ಯಾಜ್ಯ ಕಾರಣವು, ಉದ್ಭವವಾಗುವಂಥ ಸ್ಥಳದಲ್ಲಿ ನಿಗಮದೊಂದಿಗೆ ಈತ ವ್ಯವಹರಣೆಯನ್ನು ಇಟ್ಟುಕೊಂಡಿದ್ದಲ್ಲಿ, ಅಂಥ ಸ್ಥಳದಲ್ಲಿ ದಾವೆ ಸಲ್ಲಿಸಲು ಈತನಿಗೆ ಅನಾನುಕೂಲತೆಗಳು ಅಥವಾ ತೊಂದರೆಗಳು ಎದುರಾದುದಕ್ಕೆ ಯಾವುದೇ ಕಾರಣಗಳು ಕಂಡುಬಂದಿರುವುದಿಲ್ಲ. ಅದೇ ರೀತಿ, ಆ ಸ್ಥಳದಲ್ಲಿ ಅಧೀನ ಕಚೇರಿಯನ್ನು ಹೊಂದಿರುವ ನಿಗಮವು ಯಾವುದೇ ಅನಾನುಕೂಲತೆಗಳನ್ನು ಹೊಂದಿರುವುದಿಲ್ಲ.*

*15. ವಿಷಯದ ಈ ಹಿನ್ನಲೆಯಲ್ಲಿ ಪ್ರಸ್ತುತ ಎರಡೂ ಪ್ರಕರಣಗಳಲ್ಲಿ (ಸಿ) ಖಂಡವನ್ನು ಬಾಂಬೆಯಲ್ಲಿನ ನ್ಯಾಯಾಲಯಗಳ ಮೇಲೆ ಅಧಿಕಾರ ವ್ಯಾಪ್ತಿಯನ್ನು ಪ್ರದತ್ತಗೊಳಿಸಲು ಅನ್ವಯಿಸದಿರುವುದರಿಂದ ಹಾಗೂ ಒಪ್ಪಿಕೊಂಡಂತೆ ಅರ್ಜಿದಾರನು ಸಂಬಂಧಪಟ್ಟ ಸ್ಥಳಗಳಲ್ಲಿ ತನ್ನ ಅಧೀನ ಕಚೇರಿಗಳನ್ನು ಹೊಂದಿರುವೆಡೆಗಳಲ್ಲಿ ಸಾರಿಗೆಯ ಉದ್ದೇಶಕ್ಕಾಗಿ, ಈ ಎರಡೂ ಪ್ರಕರಣಗಳಲ್ಲಿ ಸರಕುಗಳನ್ನು ಇದಕ್ಕೆ ಬಿಡುಗಡೆ ಮಾಡುವಲ್ಲಿ, ಬಾಂಬೆಯಲ್ಲಿರುವ ನ್ಯಾಯಾಲಯಗಳು, ಪ್ರತ್ಯರ್ಜಿದಾರನು ಸಲ್ಲಿಸಿದ ದಾವೆಗಳನ್ನು ಪುರಸ್ಕರಿಸಲು ಯಾವುದೇ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವುದಿಲ್ಲ. ತದನುಸಾರವಾಗಿ, ಈ ಎರಡೂ ಪ್ರಕರಣಗಳಲ್ಲಿ ಅಧಿವಿಚಾರಣಾ ನ್ಯಾಯಾಲಯವು ಉಚ್ಚ ನ್ಯಾಯಾಲಯಗಳ ಮೂಲಕ*

*ಈ ಸಂಬಂಧದಲ್ಲಿ ದಾಖಲಾದ ನಿರ್ಣಯಗಳಿಗೆ ಯಾವುದೇ ವಿನಾಯಿತಿಯನ್ನು ಕೈಗೊಳ್ಳುವಂತಿರುವುದಿಲ್ಲ.*

22. ಸಿವಿಲ್ ಪ್ರಕಿಯಾ ಸಂಹಿತೆಯ 20ನೇ ಪ್ರಕರಣದ (ಸಿ) ಖಂಡದ ಹಿನ್ನಲೆಯಲ್ಲಿ, ಅಪೀಲುದಾರರ ಪರ ಮಾನ್ಯ ನ್ಯಾಯವಾದಿಗಳು, ಬೆಂಗಳೂರಿನಲ್ಲಿರುವ ನ್ಯಾಯಾಲಯವು ದಾವೆಯನ್ನು ಪುರಸ್ಕರಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರುತ್ತದೆ ಎಂಬುದನ್ನು ಒಪ್ಪಿಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ವಾದಿಸಿರುತ್ತಾರೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 20(ಸಿ) ಪ್ರಕರಣದಡಿಯಲ್ಲಿ 'ವ್ಯಾಜ್ಯಕಾರಣ'ದ ಅರ್ಥವನ್ನು ವಿವರಿಸಲು, 'ವ್ಯಾಜ್ಯಕಾರಣ'ವು ನ್ಯಾಯಾಲಯದಲ್ಲಿ ಕಾನೂನಿಗೆ ಆದ ಅಪಚಾರವನ್ನು ನಿವಾರಿಸಲು ಪರಿಣಾಮಕಾರಿಯಾಗಿ ಕಾರಣವನ್ನು ಹೊಂದಿರುವ ಹಲವಾರು ವಾಸ್ತವಾಂಶಗಳನ್ನು ಒಳಗೊಂಡಿರುತ್ತದೆ. ಆದ್ದರಿಂದ, 'ವ್ಯಾಜ್ಯಕಾರಣ' ಎಂದರೆ, ಅಡ್ಡಹಾಯುವಂಥ ಪ್ರತಿಯೊಂದು ವಾಸ್ತವಾಂಶವು, ನ್ಯಾಯಾಲಯದ ತೀರ್ಪಿಗೆ ತಮ್ಮ ಹಕ್ಕನ್ನು ಬೆಂಬಲಿಸುವ ದೃಷ್ಟಿಯಲ್ಲಿ, ಅದನ್ನು ರುಜುವಾತು ಪಡಿಸಲು ವಾದಿಗೆ ಸಂಬಂಧಿಸಿದಂತೆ ಅವಶ್ಯಕವಾಗಿರುತ್ತದೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಹಲವಾರು ವಾಸ್ತವಾಂಶಗಳಿಗೆ ಅನ್ವಯವಾಗುವ ಕಾನೂನಿಗನುಸಾರವಾಗಿ ಪರಿಗಣಿಸುವಂಥ ವಾಸ್ತವಾಂಶಗಳು, ಪ್ರತಿವಾದಿಯ ವಿರುದ್ಧ ಪರಿಹಾರವನ್ನು ಕ್ಲೇಮು ಮಾಡುವ ಹಕ್ಕನ್ನು ವಾದಿಗೆ ನೀಡುತ್ತವೆ. ಪ್ರತಿವಾದಿಯಿಂದ ಮಾಡಿದ ಯಾವುದೇ ಅಂಥ ಕೃತ್ಯವನ್ನು ಇದು ಒಳಗೊಂಡಿರಬೇಕು, ಅಂಥ ಕೃತ್ಯವು ಇಲ್ಲದಿರುವುದರಿಂದ ಯಾವುದೇ ವ್ಯಾಜ್ಯಕಾರಣವು ಸಂಭಾವ್ಯವಾಗಿ ಉಂಟಾಗುವುದಿಲ್ಲ ಅಥವಾ ಉದ್ಭವಿಸುವುದಿಲ್ಲ.

23. ಪ್ರಸ್ತುತ ಪ್ರಕರಣದಲ್ಲಿ ಒಪ್ಪಿಕೊಂಡಂತೆ, ವಾದಪತ್ರದಲ್ಲಿ ಆಪಾದಿಸಲಾದಂತೆ ವ್ಯಾಜ್ಯಕಾರಣವು ಉದ್ಭವಿಸಿದೆಯೆಂದು ಭಾವಿಸಿದರೂ ಕೂಡ, ವಾದಿಯು, ಬೆಂಗಳೂರಿನಲ್ಲಿ ಪ್ರತಿವಾದಿಯು ಕೆಲವು ಕೃತ್ಯಗಳನ್ನು ಎಸಗಿದ್ದಾನೆ ಎಂದು ತೋರಿಸಲು ಯಾವುದೇ ಮುಖ್ಯವಾದ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಲಿಖಿತ ಹೇಳಿಕೆಯಲ್ಲಿ, ಪ್ರತಿವಾದಿಯು ಕೊಲ್ಕತ್ತಾದ ಖಾಯಂ ನಿವಾಸಿಯಾಗಿದ್ದು, ಇವನು

ಕ್ಯಾನ್‌ಕಾರ್ಡ್‌ನ್ನು ಕೊಲ್ಕತ್ತಾದಲ್ಲಿ ಮಾತ್ರ ಬಳಸಿದ್ದು, ಕೊಲ್ಕತ್ತಾದಲ್ಲಿ ವಾದಿ ಬ್ಯಾಂಕಿನ ಶಾಖೆಗಳಿದ್ದು, ಪ್ರತಿವಾದಿಯ ಕ್ಯಾನ್‌ಕಾರ್ಡ್‌ನ್ನು ಕೊಲ್ಕತ್ತಾದಲ್ಲಿನ ವಾದಿ–ಬ್ಯಾಂಕ್ ಕಾರ್ಯವಿಧಾನವನ್ನನುಸರಿಸಿ ನೀಡಲಾಗಿರುತ್ತದೆ ಹಾಗೂ ಪ್ರತಿವಾದಿಯು ಬೆಂಗಳೂರಿನಲ್ಲಿ ಯಾವುದೇ ವ್ಯವಹರಣೆಯನ್ನು ಮಾಡಿರುವುದಿಲ್ಲ. ಅದ್ದರಿಂದ ಬೆಂಗಳೂರಿನಲ್ಲಿ ದಾವೆಗೆ ಸಂಬಂಧಿಸಿದ ಯಾವುದೇ ವ್ಯಾಜ್ಯಕಾರಣವು ಉದ್ಭವಿಸಿರುವುದಿಲ್ಲ. ಈ ಹಿನ್ನಲೆಯಲ್ಲಿ, ವಾದಿಯು, ಬೆಂಗಳೂರಿನಲ್ಲಿ ತನಗೆ ಸಂಬಂಧಪಟ್ಟ ವ್ಯಾಜ್ಯಕಾರಣವು ಉದ್ಭವವಾಗಿದೆಯೆಂಬುದನ್ನು ತೋರಿಸುವ ಯಾವುದೇ ಮುಖ್ಯವಾದ ದಾಸ್ತಾವೇಜನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಈ ನ್ಯಾಯಾಲಯವು, ವಾದಿ–ಅಪೀಲುದಾರನ ವಾದವನ್ನು ಒಪ್ಪಿಕೊಳ್ಳಲಾಗುವುದಿಲ್ಲವೆಂದು ಅಭಿಪ್ರಾಯಪಟ್ಟಿದ್ದು, ***ಬೋರ್ಡ್ ಆಫ್ ಟ್ರಸ್ಟೀಸ್, ಕೋಲ್ಕತ್ತಾ ಪೋರ್ಟ್ –ವಿರುದ್ಧ– ಬಾಂಬೆ ಪ್ಲೋರ್ ಮಿಲ್ಸ್ ಪ್ರೈ.ಲಿ.ನ***[2] ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಉದಾಹರಿಸಿದ್ದು, ಅದರ 4ನೇ ಪ್ಯಾರಾದಲ್ಲಿ ಈ ಮುಂದಿನಂತೆ ಅಭಿಪ್ರಾಯಪಡಲಾಗಿದೆ:

> *4. ಸರಕುಗಳನ್ನು ಆಮದು ಮಾಡಿಕೊಂಡಾಗ ಹಾಗೂ ಅವುಗಳನ್ನು ಅಪೀಲುದಾರ ನೇತಾಜಿ ಸುಭಾಷ್ ಹಡಗುಕಟ್ಟೆಗಳ, ಶೆಡ್ ಸಂ. 3ರಲ್ಲಿ ಇಳಿಸಿದಾಗ ಕೋಲ್ಕತ್ತಾದಲ್ಲಿ ವ್ಯಾಜ್ಯ ಕಾರಣವು ಉದ್ಭವಿಸಿರುತ್ತೆಂಬುದನ್ನು ಹಾಗೂ ಹಣ ಸಂದಾಯದ ಬದ್ಧತೆ ಉದ್ಭವವಾಗಿರುವುದನ್ನು ಹಾಗೂ ರಾಜಾಸ್ಥಾನದ ಭರತ್‌ಪುರದಲ್ಲಿನ ಜಿಲ್ಲಾ ನ್ಯಾಯಾಲಯದಲ್ಲಿ ದಾವೆಯನ್ನು ಆರಂಭಿಸಿದ ಪ್ರತ್ಯರ್ಜಿದಾರನು ಸರಕಗಳನ್ನು ತೆರವುಗೊಳಿಸಲು ವಿಫಲವಾಗಿರುವುದನ್ನು ಕಾಣಬಹುದಾಗಿರುತ್ತದೆ. ವ್ಯಾಜ್ಯ ಕಾರಣದ ಯಾವುದೇ ಭಾಗವು ಭರತ್‌ಪುರದಲ್ಲಿ ಉದ್ಭವಿಸಿರುವುದಿಲ್ಲ. ಅಪೀಲುದಾರನ ಕಚೇರಿಯು ಕಲ್ಕತ್ತಾದಲ್ಲಿದೆ. ಸಿವಿಲ್ ಪ್ರಕ್ರಿಯಾ ಸಂಹಿತೆಯ 20ನೇ ಪ್ರಕರಣದಡಿಯಲ್ಲಿ, ಕ್ರಮದ ಸಂಜ್ಞೇಯತೆಯನ್ನು ತೆಗೆದುಕೊಳ್ಳಲು*

2. ಎಐಆರ್ 1995 ಎಸ್‌ಸಿ 576

*ಸಕ್ಷಮವಾಗಿರುವ ಒಂದೇ ನ್ಯಾಯಾಲಯವೆಂದರೆ ಕಲ್ಕತ್ತಾದಲ್ಲಿರುವ ಸಮುಚಿತ ನ್ಯಾಯಾಲಯ. ಪ್ರತ್ಯರ್ಜಿದಾರನು ಸಲ್ಲಿಸಿದ ದಾವೆಯಲ್ಲಿ ಭರತ್‌ಪುರದ ಜಿಲ್ಲಾ ನ್ಯಾಯಾಲಯವು ಹೊರಡಿಸಿದ ಆದೇಶವು ಯಾವುದೇ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಿಲ್ಲ ಹಾಗೂ ಶೂನ್ಯವಾಗಿರುತ್ತದೆ. ಅಪೀಲುದಾರನು ಉಚ್ಚ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿದಾಗ, ಅದು ಪ್ರಕರಣವನ್ನು ವಜಾಗೊಳಿಸಿರುತ್ತದೆ. ಆದ್ದರಿಂದ ಉಚ್ಚ ನ್ಯಾಯಾಲಯವು ನಿಸ್ಸಂಶಯವಾಗಿ ಕಾನೂನು ಬಾಹಿರವಾಗಿರುವ ಹಾಗೂ ಶೂನ್ಯವಾಗಿರುವ ಆದೇಶದೊಂದಿಗೆ ಮಧ್ಯೆ ಪ್ರವೇಶಿಸುವುದನ್ನು ನಿರಾಕರಿಸಿ ಸ್ಪಷ್ಟವಾಗಿ ಕಾನೂನಾತ್ಮಕ ದೋಷವನ್ನು ಎಸಗಿರುತ್ತದೆ. ಆದ್ದರಿಂದ ರಾಜಾಸ್ಥಾನದ ಉಚ್ಚ ನ್ಯಾಯಾಲಯವು ಹಾಗೂ ಭರತ್‌ಪುರದ ಜಿಲ್ಲಾ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶಗಳನ್ನು ರದ್ದುಪಡಿಸಲಾಗಿರುತ್ತದೆ. ತದನುಸಾರವಾಗಿ ಅಪೀಲನ್ನು ಅಂಗೀಕರಿಸಲಾಗಿರುತ್ತದೆ. ನ್ಯಾಯಾಲಯದಲ್ಲಿ ಹಾಜರಾಗಿರುವುದಕ್ಕೆ ಯಾವುದೇ ವೆಚ್ಚಗಳನ್ನು ನೀಡಲಾಗುವುದಿಲ್ಲ.*

24. ಅಧಿವಿಚಾರಣಾ ನ್ಯಾಯಾಲಯವು, ದಾಖಲೆಯ ಮೇಲಿರುವ ಇಡೀ ವಸ್ತು ವಿಷಯವನ್ನು ಪರಿಗಣಿಸಿ, ಪ್ರತಿವಾದಿಯು ಕೊಲ್ಕತ್ತದಲ್ಲಿನ ನಿವಾಸಿಯಾಗಿರುತ್ತಾನೆಂಬುದರಲ್ಲಿ ಯಾವುದೇ ವಿವಾದವಿರುವುದಿಲ್ಲವೆಂಬ ವಾಸ್ತವಾಂಶವನ್ನು ದಾಖಲಿಸಿರುತ್ತದೆ; ಪ್ರಾ.ಸಾ.1, ತನ್ನ ಪಾಟೀ–ಸವಾಲಿನಲ್ಲಿ ಪ್ರತಿವಾದಿಗೆ ಕ್ಯಾನ್‌ಕಾರ್ಡ್‌ನ್ನು ಕಲ್ಕತ್ತದಲ್ಲಿಯೇ ಹಸ್ತಾಂತರಿಸಿದುದಾಗಿ ಒಪ್ಪಿಕೊಂಡಿರುತ್ತಾನೆ. ಕ್ಯಾನ್‌ಕಾರ್ಡ್ ವೀಸಾಗೆ ಸಂಬಂಧಿಸಿದ ನಿಶಾನೆ ಪಿ.1 ಅರ್ಜಿಯು, ಕಲ್ಕತ್ತಾದ ಬುರ್ರಾ ಬಜಾರ್ ಶಾಖೆಯಿಂದ ನೀಡಿರುವುದನ್ನು ಹಾಗೂ ಇಡೀ ವ್ಯವಹರಣೆಯು ಕಲ್ಕತ್ತಾದಲ್ಲಿಯೇ ನಡೆದಿದೆಯೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ವಾದಿ–ಬ್ಯಾಂಕ್ ಬೆಂಗಳೂರಿನಲ್ಲಿ ಶಾಖೆಯನ್ನು ಹೊಂದಿದೆಯೆಂಬ ಕಾರಣ ಮಾತ್ರದಿಂದಲೇ, ಅದು ಬೆಂಗಳೂರಿನಲ್ಲಿ ದಾವೆ ಆರಂಭಿಸಲು ವಾದಿ–ಬ್ಯಾಂಕಿಗೆ ಯಾವುದೇ ಹಕ್ಕನ್ನು ನೀಡಿರುವುದಿಲ್ಲ. ವಾದಿಯು ಬೆಂಗಳೂರಿನಲ್ಲಿ

ವಾದಿ ಹಾಗೂ ಪ್ರತಿವಾದಿ ನಡುವೆ ನಡೆದಿರುವ ಯಾವುದೇ ವ್ಯವಹರಣೆಯನ್ನು ತೋರಿಸಲು ನ್ಯಾಯಾಲಯದ ಎದುರು ಯಾವುದೇ ಸಾಕ್ಷ್ಯವನ್ನು ಹಾಜರುಪಡಿಸಿರುವುದಿಲ್ಲ. ಸಿವಿಲ್ ಪ್ರಕ್ರಿಯಾ ಸಂಹಿತೆಯ 20ನೇ ಪ್ರಕರಣದ ಸ್ಪಷ್ಟ ಉಪಬಂಧಗಳ ಹಿನ್ನಲೆಯಲ್ಲಿ, ವಾದಿಯು ಈ ನ್ಯಾಯಾಲಯದ ಎದುರು ದಾವೆಯನ್ನು ನಿರ್ವಹಿಸಿರುವುದಿಲ್ಲವೆಂದು ಹಾಗೂ ಆ ನ್ಯಾಯಾಲಯವು ದಾವೆಯನ್ನು ಸಲ್ಲಿಸಲು ಹಾಗೂ ದಾವೆಯನ್ನು ಅಧಿವಿಚಾರಿಸಲು ಯಾವುದೇ ಅಧಿಕಾರವ್ಯಾಪ್ತಿಯನ್ನು ಹೊಂದಿರುವುದಿಲ್ಲವೆಂದು ಅಭಿಪ್ರಾಯಪಟ್ಟಿರುತ್ತದೆ. ಅದ್ದರಿಂದ, ಪ್ರಶ್ನಿತ ಆದೇಶದ ಮೂಲಕ ಅಧಿವಿಚಾರಣಾ ನ್ಯಾಯಾಲಯವು, ವಾದಪತ್ರವನ್ನು ಅಧಿವಿಚಾರಿಸುವ ಅಧಿಕಾರವ್ಯಾಪ್ತಿಯನ್ನು ಹೊಂದಿರುವಂಥ ನ್ಯಾಯಾಲಯದ ಎದುರು ಅದನ್ನು ಸಲ್ಲಿಸುವ ನಿರ್ದೇಶನದೊಂದಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆಯ VIIನೇ ಕ್ರಮಾದೇಶದ 10ನೇ ನಿಯಮದಡಿಯಲ್ಲಿ ವಾದಿಗೆ ವಾದಪತ್ರವನ್ನು ಹಿಂದಿರುಗಿಸಿರುತ್ತದೆ. ಈ ಕ್ರಮವು ಕಾನೂನಿಗನುಸಾರವಾಗಿಯೇ ಇದ್ದು, ತದನುಸಾರವಾಗಿ ಅಪೀಲನಲ್ಲಿ ಪ್ರಸ್ತಾಪಿಸಿದ ಅಂಶಕ್ಕೆ ಸಕಾರಾತ್ಮಕವಾಗಿ ಉತ್ತರಿಸಲಾಗಿರುತ್ತದೆ.

25. ಸಿವಿಲ್ ಪ್ರಕ್ರಿಯಾ ಸಂಹಿತೆಯ, 1908 ರ 1(ಎ) ನಿಯಮದ 43ನೇ ಕ್ರಮಾದೇಶದಡಿಯಲ್ಲಿ ಅಪೀಲು ಅಧಿಕಾರ ವ್ಯಾಪ್ತಿಯ ಅಧಿಕಾರವನ್ನು ಚಲಾಯಿಸಿ ಅಧಿವಿಚಾರಣಾ ನ್ಯಾಯಾಲಯವು ಹೊರಡಿಸಿದ ಪ್ರಶ್ನಿತ ಆದೇಶದೊಂದಿಗೆ ಮಧ್ಯೆ ಪ್ರವೇಶಿಸಲು, ಅಪೀಲುದಾರ ಯಾವುದೇ ಆಧಾರವನ್ನು ಒದಗಿಸಿರುವುದಿಲ್ಲ.

ತದನುಸಾರವಾಗಿ, ಸಂಕೀರ್ಣ ಮೊದಲ ಅಪೀಲನ್ನು ವಜಾಗೊಳಿಸಲಾಗಿರುತ್ತದೆ.